ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

# ನಲಿಕಲಿ

## ಅಭ್ಯಾಸ ಸಹಿತ ಪಠ್ಯ ಪುಸ್ತಕ

# ಕನ್ನಡ

## ಭಾಗ – 1

# 2

ಎರಡನೇ ತರಗತಿ

@KTBS NOT TO BE REPUBLISHED

**ಸಮಗ್ರ ಶಿಕ್ಷಣ, ಕರ್ನಾಟಕ**
ನೃಪತುಂಗ ರಸ್ತೆ
ಬೆಂಗಳೂರು – 560 001

**ಕರ್ನಾಟಕ ಪಠ್ಯಪುಸ್ತಕ ಸಂಘ**
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

## ಸಾಹಿತ್ಯ ಪರಿಕಲ್ಪನೆ

| | |
|---|---|
| **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ.**<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು | **ಡಾ. ಕೆ. ವಿದ್ಯಾಕುಮಾರಿ ಭಾ.ಆ.ಸೇ.**<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ |

| | | |
|---|---|---|
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು (ಗುಣಮಟ್ಟ)<br>ರಾಜ್ಯ ಯೋಜನಾ ನಿರ್ದೇಶಕರ ಕಛೇರಿ<br>ಸಮಗ್ರ ಶಿಕ್ಷಣ ಕರ್ನಾಟಕ | **ಶ್ರೀ ಕೆ. ಮಂಜುನಾಥ**<br>ಸಹ ನಿರ್ದೇಶಕರು (ಗುಣಮಟ್ಟ ಖಾತ್ರಿ – ಪ್ರಭಾರಿ)<br>ರಾಜ್ಯ ಯೋಜನಾ ನಿರ್ದೇಶಕರ ಕಛೇರಿ<br>ಸಮಗ್ರ ಶಿಕ್ಷಣ ಕರ್ನಾಟಕ | **ಶ್ರೀ ಬಿ. ಚಂದ್ರಶೇಖರ**<br>ಹಿರಿಯ ಕಾರ್ಯಕ್ರಮಾಧಿಕಾರಿ<br>ರಾಜ್ಯ ಯೋಜನಾ ನಿರ್ದೇಶಕರ ಕಛೇರಿ<br>ಸಮಗ್ರ ಶಿಕ್ಷಣ ಕರ್ನಾಟಕ |

## ಸಲಹೆ

| | | |
|---|---|---|
| **ಶ್ರೀ ಎಂ.ಎಸ್. ಬೇಗ್**<br>ವಿಶ್ರಾಂತ ನಿರ್ದೇಶಕರು<br>ಶಾಲಾ ಶಿಕ್ಷಣ ಇಲಾಖೆ<br>ಬೆಂಗಳೂರು | **ಡಾ॥ ಹರಿಪ್ರಸಾದ್.ಜಿ.ವಿ**<br>ಉಪನಿರ್ದೇಶಕರು<br>ಲೋಕ ಶಿಕ್ಷಣ, ಡಿಎಸ್‌ಇಆರ್‌ಟಿ<br>ಬೆಂಗಳೂರು | **ಶ್ರೀ ವಿಶ್ವನಾಥ ಕೆ.ವಿ.**<br>ಜಿಲ್ಲಾ ಉಪಯೋಜನಾ<br>ಸಮನ್ವಯಾಧಿಕಾರಿ<br>ಬೆಂಗಳೂರು ದಕ್ಷಿಣ ಜಿಲ್ಲೆ |

## ಕಾರ್ಯಕ್ರಮ ಸಂಯೋಜನೆ ಮತ್ತು ಮಾರ್ಗದರ್ಶನ

**ಡಾ॥ ಎಸ್. ಗುಣವತಿ**
ಸಹಾಯಕ ಯೋಜನಾ ಸಮನ್ವಯಾಧಿಕಾರಿ
ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ)

NOT TO BE REPUBLISHED @KTBS

## ಪಠ್ಯಪುಸ್ತಕ ರಚನೆಯ ಸಂಪನ್ಮೂಲ ಶಿಕ್ಷಕರ ವಿವರ

**ಶ್ರೀ ಆರ್.ಡಿ. ರವೀಂದ್ರ**
ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಲೋಕನಾಥಪುರ
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

| | |
|---|---|
| **ಶ್ರೀಮತಿ ಸಂಧ್ಯಾ ಎಂ. ಹೆಗಡೆ**<br>ಸಹ ಶಿಕ್ಷಕಿ<br>ಸ.ಹಿ.ಪ್ರಾ.ಶಾಲೆ ಶ್ರೀನಿವಾಸ ಕಾಲೋನಿ<br>ಬೆಂಗಳೂರು ದಕ್ಷಿಣ ವಲಯ–1 | **ಶ್ರೀ ಕೆ. ಜಿ. ನಾಯ್ಕ**<br>ಸಹ ಶಿಕ್ಷಕ<br>ಸ. ಹಿ. ಪ್ರಾ. ಶಾಲೆ ನೇರ್ಲಮನೆ, ಸಿದ್ದಾಪುರ,<br>ಶಿರಸಿ ಶೈ. ಜಿಲ್ಲೆ. ಉತ್ತರ ಕನ್ನಡ |
| **ಶ್ರೀಮತಿ ನೀಲಾವತಿ.ಟಿ.**<br>ಸಹ ಶಿಕ್ಷಕಿ<br>ಸ.ಕಿ.ಪ್ರಾ.ಶಾಲೆ ಕಾಗೆಮರಡು<br>ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | **ಶ್ರೀ ಲೋಹಿತಾಶ್ವ ಚಾಮನೂರು**<br>ಸಂಪನ್ಮೂಲ ವ್ಯಕ್ತಿ<br>ಅಜೀಂ ಪ್ರೇಮ್‌ಜೀ ಫೌಂಡೇಷನ್,<br>ಕಲಬುರಗಿ ಜಿಲ್ಲಾ ಸಂಸ್ಥೆ. |
| **ಶ್ರೀ ಶಿವಕುಮಾರ್ ಎಸ್.**<br>ಚಿತ್ರಕಲಾ ಶಿಕ್ಷಕರು<br>ಕರ್ನಾಟಕ ಪಬ್ಲಿಕ್ ಶಾಲೆ, ಅತ್ತಿಗುಪ್ಪೆ<br>ಬೆಂಗಳೂರು ದಕ್ಷಿಣ ವಲಯ 2, ಬೆಂಗಳೂರು ದಕ್ಷಿಣ ಜಿಲ್ಲೆ | **ಶ್ರೀ ಶಾಂತಕುಮಾರ್ ಎಚ್.ಆರ್.**<br>ಚಿತ್ರಕಲಾ ಶಿಕ್ಷಕರು<br>ಕೆ.ಪಿ.ಎಸ್., ಕೆ.ಆರ್.ಪುರಂ<br>ಬೆಂಗಳೂರು ದಕ್ಷಿಣ ವಲಯ–04 |

# ಮುನ್ನುಡಿ

**ಆತ್ಮೀಯ ಶಿಕ್ಷಕ ಬಂಧುಗಳೆ ಹಾಗೂ ನೆಚ್ಚಿನ ಪೋಷಕರೆ. . . ,**

FLN ಕಲಿಕಾ ತತ್ವಗಳ ಅಡಿಯಲ್ಲಿ ಆಯ್ದ ಕಲಿಕಾ ಫಲಗಳನ್ನು ಆದ್ಯತೆಯಲ್ಲಿ ಪರಿಗಣಿಸಿ, ಮಕ್ಕಳಿಗೆ ಚಟುವಟಿಕೆಗಳನ್ನು ರೂಪಿಸಿರುವ ಪ್ರಯತ್ನವೇ ಈ ನಲಿಕಲಿ ಅಭ್ಯಾಸ ಸಹಿತ ಪಠ್ಯಪುಸ್ತಕಗಳು.

'ಬುನಾದಿ ಸಾಕ್ಷರತೆ'ಯ ಅಡಿಯಲ್ಲಿ ಪ್ರಥಮ ಭಾಷೆಯ ಕಲಿಕಾ ತತ್ವಗಳ ಅರಿವಿನೊಂದಿಗೆ ಭಾಷಾ ಮೌಖಿಕ ಸಂವಹನ ಕೌಶಲ, ಸಂಕೇತಿಕರಣ, ನಿರರ್ಗಳ ಓದು, ಗ್ರಹಿಕೆಯುಕ್ತ ಓದು ಮತ್ತು ಬರವಣಿಗೆಯ ಮೂಲ ಕೌಶಲಗಳ ಬಳಕೆಯಲ್ಲಿ ಪ್ರತೀ ಮಗುವೂ ಸ್ವಂತಿಕೆಯನ್ನು ಕಟ್ಟಿಕೊಳ್ಳುವಂತೆ ಹಲವಾರು ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ.

'ಬುನಾದಿ ಸಂಖ್ಯಾ ಜ್ಞಾನ'ದ ಅಡಿಯಲ್ಲಿ ಅಂಕೆ-ಸಂಖ್ಯೆಗಳ ಪೂರ್ವ ಕಲಿಕಾ ತತ್ವಗಳ ಅರಿವು, ಸಂಖ್ಯೆಗಳ ಕಲ್ಪನೆ, ಆಕೃತಿಗಳು-ವಿನ್ಯಾಸಗಳು, ಅಳತೆಗಳು ಮತ್ತು ದತ್ತಾಂಶ ಸಂಗ್ರಹಣೆಯ ಬಳಕೆಯನ್ನು ಪರಿಸರದ ನೆಲೆಗಟ್ಟಿನಲ್ಲಿ ಅರ್ಥೈಸಿಕೊಳ್ಳಲು ನೆರವಾಗುವಂತೆ ಹಲವಾರು ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ರೂಪಿಸಲಾಗಿದೆ.

1ನೇ ಮತ್ತು 2ನೇ ತರಗತಿಗೆ ಪರಿಸರ ಅಧ್ಯಯನ ವಿಷಯದ ಬದಲಿಗೆ 'ಆರೋಗ್ಯ ಮತ್ತು ಪರಿಸರ' ಎಂಬ ವಿಷಯದ ಅಡಿಯಲ್ಲಿ ಅತ್ಯಗತ್ಯವಾಗಿ ರೂಢಿಸಬೇಕಿರುವ ಆರೋಗ್ಯಕರ ಅಭ್ಯಾಸಗಳನ್ನು, ಪರಿಸರದ ಮೂಲಭೂತ ತಿಳುವಳಿಕೆಯ ಜ್ಞಾನ ಮತ್ತು ಅನ್ವಯ ಆಧಾರಿತ ಚಟುವಟಿಕೆಗಳನ್ನು ನೀಡಲಾಗಿದ್ದು, ಒಳಾಂಗಣ ಮತ್ತು ಹೊರಾಂಗಣ ಸನ್ನಿವೇಶಗಳಲ್ಲಿ ಚರ್ಚಿಸಿ, ಮಾಹಿತಿ / ದತ್ತಾಂಶ ಸಂಗ್ರಹಿಸಿ, ಯೋಜಿಸಿ, 21ನೇ ಶತಮಾನದ ಕೌಶಲ್ಯಗಳ ಸಹಿತ ಅನುಭವಗಳನ್ನು ಕಟ್ಟಿಕೊಳ್ಳಲು ನೆರವಾಗುವಂತೆ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಎನ್.ಸಿ.ಇ.ಆರ್.ಟಿ., ಎ.ಪಿ.ಎಫ್., ಪ್ರಥಮ್, ಅಕ್ಷರ, ಧ್ವನಿ ಮತ್ತು ಇತರೆ ಸಂಸ್ಥೆಗಳ ಅಗತ್ಯ ಸಂಪನ್ಮೂಲಗಳನ್ನು ಮಕ್ಕಳ ಕಲಿಕಾ ಹಿತದೃಷ್ಟಿಯಿಂದ ಕೆಲವು ಚಟುವಟಿಕೆಗಳಲ್ಲಿ ಅಳವಡಿಸಿಕೊಂಡಿದ್ದು, ಇದೇ ಸಂದರ್ಭದಲ್ಲಿ ಅವುಗಳ ನೆರವು ಮತ್ತು ಕೃಪೆಯನ್ನು ಸಹ ಸ್ಮರಿಸಿದೆ. FLN ಆಧಾರಿತ ಪಠ್ಯವಸ್ತುವಿನ ಪ್ರಮುಖ ಆಶಯಗಳಿಗೆ ಪೂರಕವಾಗಿ ಪಠ್ಯಪುಸ್ತಕಗಳ ವಿನ್ಯಾಸಕ್ಕೆ ಅಗತ್ಯ ಕ್ರಮವಹಿಸಲಾಗಿದೆ. ಇದಕ್ಕೆ ಅನುಗುಣವಾಗಿ ತರಗತಿ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸಲು ಹಾಗೂ ಮೌಲ್ಯಾಂಕನ ಇಲ್ಲಿನ ಚಟುವಟಿಕೆಗಳನ್ನು ಆಯೋಜಿಸಲು ಕಾರ್ಯೋನ್ಮುಖರಾಗುವಂತೆ ಶಿಕ್ಷಕರಿಗೆ ಈ ಮೂಲಕ ಸೂಚಿಸಲಾಗಿದೆ. ಚಟುವಟಿಕೆಗಳನ್ನು ಮಾದರಿಯಾಗಿ ನೀಡಲಾಗಿದ್ದು, ಮಕ್ಕಳಿಗೆ ಯಾವುದೇ ರೀತಿಯ ಒತ್ತಡವಾಗದಂತೆ ಶಿಕ್ಷಕರು ಕ್ರಿಯಾಶೀಲ ಚಟುವಟಿಕೆಗಳನ್ನು ರೂಪಿಕೊಳ್ಳಲು ಮುಕ್ತ ಅವಕಾಶವನ್ನು ಕಲ್ಪಿಸಿದೆ.

ಎಂದಿನಂತೆ ಎಲ್ಲಾ ಹಂತದ ಸಹವರ್ತಿಗಳ ಹಿಮ್ಮಾಹಿತಿ ಮತ್ತು ಸಲಹೆಗಳನ್ನು ಸ್ವಾಗತಿಸಿದೆ. ಪುಸ್ತಕಗಳ ರಚನೆಗೆ ಶ್ರಮಿಸಿದ ಸಂಪನ್ಮೂಲ ತಜ್ಞರು ಮತ್ತು ಶಿಕ್ಷಕರ ಸಮೂಹವನ್ನು ಅಭಿನಂದಿಸುತ್ತಾ, ವಿವಿಧ ಹಂತದ ಅಧಿಕಾರಿಗಳು, ಕ್ಷೇತ್ರ ಹಂತದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಶಾಲಾ ಭೇಟಿಯನ್ನು ನಿಯಮಿತವಾಗಿ ಕೈಗೊಳ್ಳುವ ಮೂಲಕ ಸಮರ್ಪಕ ಅನುಷ್ಠಾನ ಮತ್ತು ಅನುಪಾಲನೆಗೆ ಮುಂದಾಗುವಂತೆ ನಿರ್ದೇಶಿಸಿದೆ.

**ರಾಜ್ಯ ಯೋಜನಾ ನಿರ್ದೇಶಕರು**
**ಸಮಗ್ರ ಶಿಕ್ಷಣ ಕರ್ನಾಟಕ**

© KTBS NOT TO BE REPUBLISHED

# ಪರಿವಿಡಿ

**2ನೇ ತರಗತಿ ಕನ್ನಡ**
**ಭಾಗ – 1**


| ಮೈಲುಗಲ್ಲು | ಶೀರ್ಷಿಕೆ | ಚಟುವಟಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| * | ಸೇತುಬಂಧ – ನನ್ನ ಕಲಿಕೆ | 22 | 1–22 |
| 1 | ಹಾಡಿನ ಮಾಲೆ | 10 | 23–33 |
| 2 | ನಿಸರ್ಗ ನಡಿಗೆ | 9 | 34–47 |
| 3 | ಕಥನ ಕವನ | 12 | 48–61 |
| 4 | ಕಥಾವನ | 11 | 62–80 |
| * | ಮೌಲ್ಯಾಂಕನ – ಸೂಚಿತ ಕಲಿಕಾ ಫಲಗಳು | | 3ನೇ ರಕ್ಷಾ ಪುಟ |


@KTBS NOT TO BE REPUBLISHED

ಸೇ.ಬಂ.

## ಹಾಡುವೆ ನಾನು

ಸಾ

ಹಾಡನ್ನು ರಾಗಬದ್ಧವಾಗಿ ಹಾಡೋಣ. ಪ್ರಶ್ನೆಗಳಿಗೆ ಉತ್ತರಿಸೋಣ.

# ಪುಟ್ಟು

ಪುಟು ಪುಟು ಪುಟು ಪುಟು ಹೆಜ್ಜೆಯನಿಟ್ಟು
ಕನ್ನಡಿ ಇದ್ದೆಡೆ ಬಂದನು ಪುಟ್ಟು
ಕನ್ನಡಿ ನೋಡಲು ಇನ್ನೊಂದು
ಪುಟ್ಟುವ ಕಂಡನು ಅವನಂದು

ನಕ್ಕರೆ ನಕ್ಕಿತು ಕನ್ನಡಿ ಪುಟ್ಟು
ಅತ್ತರೆ ಅತ್ತಿತು ಏನಿದು ಗುಟ್ಟು
ಹಿಡಿಯಲು ಹೋದರೆ ಸಿಗಲಿಲ್ಲ
ಮಾತಿಗೆ ಉತ್ತರ ಕೊಡಲಿಲ್ಲ


@KTBS NOT TO BE REPUBLISHED

ಸಟ್ಟನೆ ಪುಟ್ಟುಗೆ ಬಂದಿತು ಸಿಟ್ಟು
ಸಿಟ್ಟಿನ ಭರದಲಿ ಕೊಟ್ಟನು ಪೆಟ್ಟು
ತನಗೇ ತಾಗಲು ಆ ಪೆಟ್ಟು
ಅತ್ತನು ಪುಟ್ಟು ಬಾಯ್ಬಿಟ್ಟು

– ಪಳಕಳ ಸೀತಾರಾಮ ಭಟ್ಟ



1. ಪುಟ್ಟು ಏನನ್ನು ನೋಡಿ ನಕ್ಕನು?
2. ಪುಟ್ಟುವಿಗೆ ಸಿಟ್ಟು ಬರಲು ಕಾರಣವೇನು?

ಹಾಡನ್ನು ರಾಗಬದ್ಧವಾಗಿ ಹಾಡೋಣ. ಪ್ರಶ್ನೆಗಳಿಗೆ ಉತ್ತರಿಸೋಣ.

# ಗಡಿಯಾರ



ಗಂಟೆಯ ನೆಂಟನೆ ಓ ಗಡಿಯಾರ
ಬೆಳ್ಳಿಯ ಬಣ್ಣದ ಗೋಳಾಕಾರ
ವೇಳೆಯ ತಿಳಿಯಲು ನೀನಾಧಾರ
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಹಗಲೂ ಇರುಳೂ ಒಂದೇ ಬಾಳು
ನೀನಾವಾಗಲೂ ದುಡಿಯುವ ಆಳು
ಕಿವಿಯನು ಹಿಂಡಲು ನಿನಗದು ಕೂಳು
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಮುಖವೊಂದಾದರು ದ್ವಾದಶ ನೇತ್ರ
ಎರಡೇ ಕೈಗಳು ಏನು ವಿಚಿತ್ರ!
ಯಂತ್ರ ಪುರಾಣದ ರಕ್ಕಸ ಪುತ್ರ
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

@KTBS NOT TO BE REPUBLISHED



ಟಿಕ್ ಟಿಕ್ ಎನ್ನುತ ಹೇಳುವೆಯೇನು
ನಿನ್ನೀ ಮಾತಿನ ಒಳಗುಟ್ಟೇನು
ಕಾಲವು ನಿಲ್ಲದು ಎನ್ನುವಿಯೇನು
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ದುಡಿಯುವುದೊಂದೇ ನಿನ್ನಯ ಕರ್ಮ
ದುಡಿಸುವುದೊಂದೇ ನಮ್ಮಯ ಧರ್ಮ
ಇಂತಿರುವುದು ಕಲಿಯುಗದೀ ಧರ್ಮ
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

– ದಿನಕರ ದೇಸಾಯಿ



1. ಗಂಟೆಯ ನೆಂಟನು ಯಾರು?
2. ಗಡಿಯಾರ ನಮಗೆ ಏಕೆ ಬೇಕು?

ಸೇ.ಬಂ.

# ನಾನೂ ಮಾತನಾಡುವೆ

ಸಾ

ಚಿತ್ರಗಳನ್ನು ಗಮನಿಸಿ, ಅವುಗಳ ಕುರಿತು ಗೆಳೆಯರೊಂದಿಗೆ ಮಾತನಾಡೋಣ.













© KTBS NOT TO BE REPUBLISHED

ಸೇ.ಬಂ.

# ನಾನೂ ಮಾತನಾಡುವೆ

ಸಾ

ಚಿತ್ರವನ್ನು ಗಮನಿಸಿ, ಇದರ ಕುರಿತು ಗೆಳೆಯರೊಂದಿಗೆ ಮಾತನಾಡೋಣ.



ಸೇ.ಬಂ.

# ದಾರಿ ತೋರಿಸು

ಸಾ

ಮುನ್ನಿಗೆ ಹಸಿವಾಗಿದ್ದು ಅದಕ್ಕೆ ತಿನ್ನಲು ಕ್ಯಾರೆಟ್ ಬೇಕಾಗಿದೆ. ಕ್ಯಾರೆಟ್ ತಿನ್ನಲು 'ಅ' ದಿಂದ 'ಳ' ವರೆಗಿನ ಅಕ್ಷರಗಳಿಗೆ ಕ್ರಮವಾಗಿ ಬಣ್ಣ ತುಂಬಿ ದಾರಿ ತೋರಿಸೋಣ.

| | | | | | | | | |
|---|---|---|---|---|---|---|---|---|
|  | | ಪ | ಗ | ಚ | ಬ | ಮ | ವ | ಞ |
| | | ಅ | ಆ | ವ | ನ | ಲ | ಷ | ಸ |
| | | ಯ | ಇ | ಈ | ಮ | ಜ | ಗ | ದ |
| ಕ | ನ | ಮ | ಗ | ಉ | ಲ | ಘ | ಙ | ಚ |
| ಹ | ಗ | ಎ | ಋ | ಊ | ಕ | ಗ | ಪ | ಛ |
| ವ | ಲ | ಏ | ರ | ಅ | ಜ | ಖ | ಒ | ಜ |
| ಜ | ಫ | ಐ | ಸ | ಯ | ಹ | ಕ | ಯ | ಝ |
| ತ | ಡ | ಒ | ಓ | ಔ | ಅಂ | ಅಃ | ಯ | ಞ |
| ಸ | ರ | ಹ | ಬ | ಮ | ನ | ವ | ತ | ಟ |
| ತ | ಡ | ಒ | ದ | ಫ | ಡ | ಎ | ರ | ಠ |
| ಮ | ಭ | ಬ | ಉ | ಥ | ತ | ಣ | ಢ | ಡ |
| ಯ | ದ | ಫ | ತ | ದ | ಸ | ಜ | ನ | ಷ |
| ರ | ರ | ಪ | ನ | ಧ | ದ | ಕ | ಬ | ಞ |
| ಲ | ಉ | ಯ | ಇ | ಉ | ಗ |  | | |
| ವ | ಶ | ಷ | ಸ | ಹ | ಳ | | | |



@KTBS NOT TO BE REPUBLISHED

ಸೇ.ಬಂ.

# ಕನ್ನಡ ವರ್ಣಮಾಲೆ ಅಕ್ಷರಗಳನ್ನು ಬರೆ

ಸಾ



ಅ ದಿಂದ ಳ ವರೆಗಿನ ಕನ್ನಡ ವರ್ಣಮಾಲೆ ಅಕ್ಷರಗಳನ್ನು ಕ್ರಮವಾಗಿ ಕೆಳಗಿನ ಖಾಲಿ ಜಾಗದಲ್ಲಿ ಬರೆಯೋಣ.

| | | | | | | | |
|---|---|---|---|---|---|---|---|
| ಅ | ಆ | | | ಉ | | | |
| | | | | ಔ | | | |

- ಅ ದಿಂದ ಅಃ ವರೆಗಿನ ಒಟ್ಟು ಅಕ್ಷರಗಳ ಸಂಖ್ಯೆ ☐

| | | | | |
|---|---|---|---|---|
| ಕ | ಖ | | | ಙ |
| | | ಜ | | |
| | | | | ಣ |
| | ಥ | | | |
| | | | ಭ | |

| | | | | | | | | |
|---|---|---|---|---|---|---|---|---|
| | | ಲ | | | | | | ಳ |

- 'ಅ' ದಿಂದ 'ಳ' ವರೆಗಿನ ಒಟ್ಟು ಅಕ್ಷರಗಳ ಸಂಖ್ಯೆ– ☐

@KTBS NOT TO BE REPUBLISHED

ಸೇ.ಬಂ.

# ಪ್ರಾಸ ಪದ ರಚಿಸು

ಸಾ

ನೀಡಿರುವ ಅಕ್ಷರಗಳನ್ನು ಚಿತ್ರದೊಳಗಿನ ಖಾಲಿ ಜಾಗದಲ್ಲಿ ಬರೆಯೋಣ. ಆ ಅಕ್ಷರಗಳನ್ನು ಮಧ್ಯದ ಅಕ್ಷರದೊಂದಿಗೆ ಸೇರಿಸಿ, ಮಾದರಿಯಂತೆ ಪ್ರಾಸಪದಗಳನ್ನು ಬರೆಯೋಣ.

ಕ, ಸ, ದ, ಮ, ವ




ಮಾದರಿ: ಕರ – ಸರ – ದರ – ಮರ – ವರ

ಬ, ಜ, ದ, ಮ, ವ




ಮ, ಹ, ಕ, ಪ, ನ




ರ, ವ, ಸ, ಮ, ಗ




@KTBS NOT TO BE REPUBLISHED

ಸೇ.ಬಂ.

# ಗುಣಿತಾಕ್ಷರ ಬರವಣಿಗೆ

ಸಾ



ಗುಣಿತಾಕ್ಷರಗಳನ್ನು ಕ್ರಮವಾಗಿ ಕೆಳಗಿನ ಖಾಲಿ ಜಾಗದಲ್ಲಿ ಬರೆಯೋಣ.

| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
|---|---|---|---|---|---|---|---|---|---|---|---|---|---|---|
| ˏ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
| ಮಾದರಿ ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| | | | | | | | ಖೆ | | | | | ಖೌ | | |
| | | ಗಿ | | | | | | | | | ಗೋ | | | |
| | | | | ಚು | | | | | ಚೈ | | | | | |
| ಜ | | | | | | | | | | | | | ಜಂ | |
| | | | | | ಟೂ | | | | | | | | | |
| ಡ | | | | | | ಡೃ | | | | | | | | |
| | ತಾ | | | | | | | | | ತೊ | | | | |
| ದ | | | | | | | | | | | | | | ದಃ |
| | | | | | | | | ಫೇ | | | | | | |
| | | | ಸೀ | | | | | | ಸೈ | | | | | |

@KTBS NOT TO BE REPUBLISHED

ಸೇ.ಬಂ.

# ಅಕ್ಷರ ಕೂಡಿಸಿ ಬರೆಯೋಣ

ಸಾ



ಸ್ವರ ಮತ್ತು ವ್ಯಂಜನಾಕ್ಷರ ಕೂಡಿಸಿ ಬರೆಯೋಣ.

ಮಾದರಿ:

| | | | |
|---|---|---|---|
| ಕ್ + ಅ = ಕ | ಕ್ + ಆ = ಕಾ | ಕ್ + ಇ = ಕಿ | ಕ್ + ಈ = ಕೀ |
| ಕ್ + ಉ = ಕು | ಕ್ + ಊ = ಕೂ | ಕ್ + ಋ = ಕೃ | ಕ್ + ಎ = ಕೆ |
| ಕ್ + ಏ = ಕೇ | ಕ್ + ಐ = ಕೈ | ಕ್ + ಒ = ಕೊ | ಕ್ + ಓ = ಕೋ |
| ಕ್ + ಔ = ಕೌ | ಕ್ + ಅಂ = ಕಂ | ಕ್ + ಅ: = ಕ: | |

| | | |
|---|---|---|
| ಚ್+ಇ = | ತ್+ಅಂ = | ಠ್+ಅ = |
| ಚ್+ಎ = | ಖ್+ಆ = | ಡ್+ಒ = |
| ಡ+ಉ = | ಝ್+ಅ = | ಥ್+ಊ = |
| ಷ್+ಔ = | ಬ್+ಓ = | ಚ್+ಅ: = |

| | | |
|---|---|---|
| ಗ್+ಅ = | ಹ್+ಆ = | ಫ್+ಐ = |
| ನ್+ಊ = | ಷ್+ಒ = | ರ್+ಅಂ = |
| ಕ್+ಇ = | ಲ್+ಎ = | ನ್+ಋ = |
| ಮ್+ಏ = | ರ್+ಓ = | ಜ್+ಅಃ = |

| | | |
|---|---|---|
| ಧ್+ಆ = | ಬ್+ಅಂ = | ಲ್+ಉ = |
| ನ್+ಐ = | ಮ್+ಇ = | ವ್+ಇ = |
| ಪ್+ಈ = | ಯ್+ಓ = | ಶ್+ಔ = |
| ಫ್+ಓ = | ರ್+ಐ = | ಹ್+ಎ = |

NOT TO BE REPUBLISHED ©KTBS

ಸೇ.ಬಂ.

# ಚಿತ್ರಪದ

ಸಾ

**ಚಿತ್ರ ಗುರುತಿಸಿ ಹೆಸರು ಬರೆಯೋಣ.**














@KTBS
NOT TO BE REPUBLISHED

ಸೇ.ಬಂ.

# ಒತ್ತಕ್ಷರ ಬರವಣಿಗೆ

ಸಾ



ಮಾದರಿಯಂತೆ ಒತ್ತಕ್ಷರ ಬರೆಯೋಣ.

| ಜ | ಟ | ಣ | ಬ | ಖ | ವ | ಙ | ಞ |
|---|---|---|---|---|---|---|---|
| ್ಜ | ್ಟ | ್ಣ | ್ಬ | ್ಖ | ್ವ | ್ಙ | ್ಞ |
| ಜ್ಜ | | | | | | | |

| ಕ | ಗ | ಚ | ಟ | ಡ | ದ | ಪ | ಶ | ಷ | ಸ | ಳ |
|---|---|---|---|---|---|---|---|---|---|---|
| ್ಕ | ್ಗ | ್ಚ | ್ಟ | ್ಡ | ್ದ | ್ಪ | ್ಶ | ್ಷ | ್ಸ | ್ಳ |
| ಕ್ಕ | | | | | | | | | | |

| ಠ | ಘ | ಫ | ಝ | ಛ | ಧ | ಥ | ಢ | ಭ |
|---|---|---|---|---|---|---|---|---|
| ್ಠ | ್ಘ | ್ಫ | ್ಝ | ್ಛ | ್ಧ | ್ಥ | ್ಢ | ್ಭ |
| ಠ್ಠ | | | | | | | | |

| ಮ | ನ | ತ | ರ | ಲ | ಯ |
|---|---|---|---|---|---|
| ್ಮ | ್ನ | ್ತ | ್ರ | ್ಲ | ್ಯ |
| ಮ್ಮ | | | | | |

@KTBS
NOT TO BE REPUBLISHED

ಸೇ.ಬಂ.

# ಒತ್ತಕ್ಷರ ಪದಗಳ ಬರವಣಿಗೆ

ಸಾ

ನೀಡಿದ ಒತ್ತಕ್ಷರಗಳನ್ನು ಬಳಸಿ ಮಾದರಿಯಂತೆ ಪದಗಳನ್ನು ಬರೆಯೋಣ.

| ಜ್ಜ | ಟ್ಟ | ಣ್ಣ | ಬ್ಬ | ವ್ವ |
|---|---|---|---|---|
| ಅಜ್ಜ | ಕಟ್ಟಿಗೆ | ಅಣ್ಣ | ಹಬ್ಬ | ಸುವ್ವಾಲಿ |
| | | | | |
| | | | | |

| ಕ್ಕ | ಗ್ಗ | ಚ್ಚ | ಡ್ಡ | ದ್ದ | ಪ್ಪ | ಸ್ಸ | ಳ್ಳ |
|---|---|---|---|---|---|---|---|
| ಅಕ್ಕರೆ | ಮಗ್ಗಿ | ಅಚ್ಚು | ಗುಡ್ಡ | ಮುದ್ದೆ | ಪಪ್ಪಾಯಿ | ಧನಸ್ಸು | ಬೆಳ್ಳಿ |
| | | | | | | | |
| | | | | | | | |

@KTBS NOT TO BE REPUBLISHED

| ಮ್ಮ | ನ್ನ | ತ್ತ | ರ್ರ | ಲ್ಲ | ಯ್ಯ |
|---|---|---|---|---|---|
| ಕಮ್ಮಾರ | ಹನ್ನೊಂದು | ಸುತ್ತೋಲೆ | ಪುರ್ರನೆ | ಹಲ್ಲು | ಉಯ್ಯಾಲೆ |
| | | | | | |
| | | | | | |

ಸೇ.ಬಂ.

# ವಿಂಗಡಿಸಿ ಬರೆ

ಸಾ

ಉದಾಹರಣೆಯಲ್ಲಿ ನೀಡಿದಂತೆ ಒತ್ತಕ್ಷರಗಳಿಗೆ ಸರಿಹೊಂದುವ ಪದಗಳನ್ನು ಖಾಲಿ ಜಾಗದಲ್ಲಿ ಆರಿಸಿ ಬರೆಯೋಣ.

| | | | | |
|---|---|---|---|---|
| ಪುಕ್ಕ | ಪೆಟ್ಟಿಗೆ | ಹಕ್ಕಿ | ಅಚ್ಚು | ನುಗ್ಗಾಟ |
| ಮೆಟ್ಟಿಲು | ಅಕ್ಕರೆ | ಸುಗ್ಗಿಕಾಲ | ಪೊಟ್ಟಣ | ಹೊಟ್ಟು |
| ಹಿಗ್ಗು | ಅಚ್ಚರಿ | ಹಚ್ಚೇವು | ಮಗ್ಗ | ತಕ್ಕಡಿ |
| ಬಚ್ಚಿಡು | ಮೊಗ್ಗು | ಸಕ್ಕರೆ | ಪುಟ್ಟಿ | ಲಚ್ಚಿ |
| ಗಜ್ಜರಿ | ಗುಬ್ಬಿ | ಇದ್ದಿಲು | ಗುಡ್ಡ | ಹೆಜ್ಜೇನು |
| ಸಜ್ಜೆ | ನಿದ್ದೆ | ಹುಬ್ಬು | ಮುದ್ದು | ಹೆಬ್ಬಂಡೆ |
| ಎದ್ದೇಳು | ಕಜ್ಜಾಯ | ದುಡ್ಡು | ಕಡ್ಡಿ | ದೊಡ್ಡಪ್ಪ |
| ಕಡ್ಡಾಯ | ದಿಬ್ಬಣ | ಹೆಜ್ಜೆ | ಹಬ್ಬ | ಗದ್ದೆ |

@KTBS NOT TO BE REPUBLISHED

ಉದಾ:

| ಕ್ಕ | ಗ್ಗ | ಚ್ಚ | ಟ್ಟ | ಡ್ಡ |
|---|---|---|---|---|
| ಪುಕ್ಕ | | | | |
| | | | | |

ಸೇ.ಬಂ.

## ವಿಂಗಡಿಸಿ ಬರೆ

ಮುಂದುವರೆದಿದೆ..

ಸಾ

| | | | | |
|---|---|---|---|---|
| | | | | |
| | | | | |
| | | | | |
| ಡ್ಡ | ದ್ದ | ಬ್ಬ | ಜ್ಜ | ಡ್ಡ |
| | | | | |
| | | | | |
| | | | | |
| | | | | |

@KTBS NOT TO BE REPUBLISHED

ಸೇ.ಬಂ.

# ವಿಜಾತಿ ಒತ್ತಕ್ಷರ ಬಳಸಿ ಪದ ಬರೆ

ಸಾ



ನೀಡಿದ ಪದಗಳ ಕೆಳಗೆ ಅದೇ ಒತ್ತಕ್ಷರ ಬರುವಂತೆ ವಿಜಾತಿ ಒತ್ತಕ್ಷರ ಪದಗಳನ್ನು ಮಾದರಿಯಂತೆ ಬರೆಯೋಣ.

| | | | | | | |
|---|---|---|---|---|---|---|
| ನಿಲ್ದಾಣ | ಸ್ಥಳ | ಆಶ್ಲೇಷ | ಶಿಲ್ಪ | ಶಿಕ್ಷಕ | ಭಾಗ್ಯ | ರಾತ್ರಿ |
| ಹೊಯ್ದಾಟ | | | | | | |
| ಶಬ್ದ | | | | | | |
| ನಮಸ್ಕಾರ | ತೃಪ್ತಿ | ಕಷ್ಟ | ನಿಶ್ಚಯ | ರಶ್ಮಿ | ಉತ್ಸವ | ಸದ್ಗತಿ |
| | | | | | | |
| | | | | | | |
| ಉಷ್ಣ | ರತ್ನ | ಸ್ವರ | ಉದ್ಭವ | ಅರ್ಥ | ವಿಜ್ಞಾನ | ಆಹ್ಲಾದ |
| | | | | | | |
| | | | | | | |

@KTBS NOT TO BE REPUBLISHED

ಸೇ.ಬಂ.

# ಅಂತ್ಯಾಕ್ಷರಿ

ಸಾ



ಪದದ ಕೊನೆಯ ಅಕ್ಷರ ಗಮನಿಸಿ, ಆ ಅಕ್ಷರದಿಂದ ಹೊಸ ಅಂತ್ಯಾಕ್ಷರಿ ಪದ ರಚಿಸೋಣ.

ಮಾದರಿ:




NOT TO BE REPUBLISHED @KTBS

ಸೇ.ಬಂ.

# ಪದಜಾಲ

ಸಾ



ಪದಜಾಲದಲ್ಲಿ ಕೆಲವು ಪದಗಳು ಅಡಗಿ ಕುಳಿತಿವೆ.
ಅವುಗಳನ್ನು ಹುಡುಕಿ ಬಣ್ಣ ಹಚ್ಚೋಣ.

| | | | | | | |
|---|---|---|---|---|---|---|
| ಕ | ಅ | ಕ್ಷಿ | ಐ | ಊ | ದೇ | ಕ್ಷ |
| ಗ | ಸ | ಪ | ಶ್ವಾ | ನ | ಇ | ಥ |
| ದ | ಚ | ಣಿ | ಸ | ವಾ | ಮಾ | ಶ |
| ಲ | ಯ | ವ | ರೈ | ತ | ವು | ಅ |
| ಡ | ಜ | ಹಾ | ಉ | ಈ | ತ | ಭಿ |
| ಯ | ಮಾ | ಹ | ಗಾ | ಬ | ಪ | ಮಾ |
| ಪಾ | ನ | ಕ | ಡಿ | ಅ | ಲ | ನ |

@KTBS
NOT TO BE REPUBLISHED

ಬಣ್ಣ ಹಚ್ಚಿದ ಪದಗಳನ್ನು ಇಲ್ಲಿ ಬರೆಯೋಣ.

ಅಕ್ಷಿ

ಸೇ.ಬಂ.

# ಪದ ರಚನೆ

ಸಾ

**ಮಾದರಿಯಂತೆ ಪದ ರಚಿಸೋಣ.**

ಮಾದರಿ:







| | |
|---|---|
| ರೆಕ್ಕೆ | ಕೊಕ್ಕೆ |
| ಚುಕ್ಕೆ | ಓಕ್ಕೆ |

| | |
|---|---|
| | |
| | |







| | |
|---|---|
| | |
| | |

| | |
|---|---|
| | |
| | |

@KTBS NOT TO BE REPUBLISHED

ಸೇ.ಬಂ.

# ನನ್ನ ಇಷ್ಟದ ಆಟಿಕೆ

ಸಾ

ನಮಗೆ ಇಷ್ಟವಾದ ಆಟಿಕೆಗಳನ್ನು ಕೆಳಗಿನ ಬುಟ್ಟಿಗೆ ಗೆರೆ ಎಳೆದು ತುಂಬಿಸೋಣ.
ಅವುಗಳ ಕುರಿತು ಮಾತನಾಡೋಣ.



©KTBS NOT TO BE REPUBLISHED

- ಬುಟ್ಟಿಯಲ್ಲಿ ತುಂಬಿದ ಆಟಿಕೆಗಳ ಹೆಸರು ಬರೆಯೋಣ.

______________ ______________ ______________

______________ ______________ ______________

ಸೇ.ಬಂ.

# ವಾಕ್ಯ ಪೂರ್ಣಗೊಳಿಸು

ಸಾ

**ಕೆಳಗಿನ ವಾಕ್ಯಗಳಲ್ಲಿನ ಚಿತ್ರಕ್ಕೆ ಸರಿ ಹೊಂದುವ ಪದವನ್ನು ಬರೆದು ವಾಕ್ಯವನ್ನು ಪೂರ್ಣಗೊಳಿಸೋಣ. ಪೂರ್ಣಗೊಳಿಸಿದ ವಾಕ್ಯವನ್ನು ಕೆಳಗಿನ ಖಾಲಿ ಜಾಗದಲ್ಲಿ ಬರೆಯೋಣ.**

1. ದೀಪಾ ಶಾಲೆಗೆ ಬರುವಾಗ  __________ ಯನ್ನು ನೋಡಿದಳು.

_______________________________________________

2. ಮೇರಿಯ  ________ಯು ಶಾಲೆಯಿಂದ ದೂರ ಇದೆ.

_______________________________________________

3. ಶಾಲೆಯ ಮುಂಭಾಗದಲ್ಲಿ  ________ ಗಳು ಇವೆ.

_______________________________________________

@KTBS NOT TO BE REPUBLISHED

ಸೇ.ಬಂ.

## ವಾಕ್ಯ ಪೂರ್ಣಗೊಳಿಸು

ಸಾ

4. ರಹೀಮ್ ಮತ್ತು ಮನು ಇಬ್ಬರೂ ಅಂಗಡಿಯಿಂದ __________ ನ್ನು ತಂದರು.



---

5. ರವಿಗೆ  __________ ಎಂದರೆ ತುಂಬಾ ಇಷ್ಟ.

---

6. ನಸೀಮಾಳಿಗೆ  __________ ಎಂದರೆ ತುಂಬಾ ಇಷ್ಟ.

---

@KTBS NOT TO BE REPUBLISHED

ಸೇ.ಬಂ.

# ವಾಕ್ಯ ಬರೆ

ಸಾ

**ಪದಗಳು ಹಾಗೂ ಚಿತ್ರಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸೋಣ.**

| | | |
|---|---|---|
| ಹುಡುಗನು |  | ತಂದರು. |
| ಅಜ್ಜನು | | ನೋಡಿದರು. |
| ಹುಡುಗಿಯು |  | ತಿಂದಳು. |
| ಅಣ್ಣಂದಿರು | | ನೋಡಿದಳು. |
| ಅಕ್ಕಂದಿರು |  | ನೋಡಿದನು. |
| ಅಜ್ಜಿಯು | | ತಿಂದನು. |

ಮಾದರಿ: ಹುಡುಗನು ಹಕ್ಕಿಯನ್ನು ನೋಡಿದನು.

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

NOT TO BE PUBLISHED

1

# 1.1 ನಾನೂ ಮಾತನಾಡುವೆ

2T

ಚಿತ್ರದ ಕುರಿತು ಗೆಳೆಯರೊಂದಿಗೆ ವಿಷಯ ಹಂಚಿಕೊಳ್ಳೋಣ.


@KTBS NOT TO BE REPUBLISHED

## ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಚಿತ್ರದಲ್ಲಿ ಮಕ್ಕಳು ಏನು ಮಾಡುತ್ತಿದ್ದಾರೆ?
2. ನೀನು ಎಂದಾದರೂ ಗಾಳಿಪಟ ಹಾರಿಸಿದ್ದೀಯಾ?
3. ಗಾಳಿಪಟ ಹಾರಿಸಿದ ಅನುಭವಗಳನ್ನು ನಿನ್ನ ಗೆಳೆಯರೊಂದಿಗೆ ಹಂಚಿಕೊ.

☛ ನಾನು ಚೆನ್ನಾಗಿ ಮಾತನಾಡಿದ್ದೇನೆ. ☐

☛ ನಾನು ಇನ್ನೂ ಸ್ವಲ್ಪ ವಿಷಯ ಸೇರಿಸಬಹುದಿತ್ತು. ☐

ಶಿಕ್ಷಕರ ಸಹಿ ಮತ್ತು ದಿನಾಂಕ

1

## 1.2 ಹಾಡು

2T

ಹಿರಿಯರ ಸಹಾಯದಿಂದ ಪದ್ಯವನ್ನು ಆಲಿಸೋಣ. ನಾವೂ ಹಾಡೋಣ.

# ಅನ್ನದಾತ



ಇವನೆ ನೋಡು ಅನ್ನದಾತ
ಹೊಲದಿ ದುಡಿದೇ ದುಡಿವನು
ನಾಡ ಜನರು ಬದುಕಲೆಂದು
ದವಸ ಧಾನ್ಯ ಬೆಳೆವನು

ಮಳೆಯ ಗುಡುಗು ಚಳಿಯ ನಡುಗು
ಬಿಸಿಲ ಬೇಗೆ ಸಹಿಸುತ
ಬೆವರು ಸುರಿಸಿ ಕಷ್ಟ ಸಹಿಸಿ
ಒಂದೇ ಸಮನೆ ದುಡಿಯುತ

ಗಟ್ಟಿ ದೇಹ ದೊಡ್ಡ ಮನಸು
ದೇವನಿಂದ ಪಡೆವನು
ಯೋಗಿಯಾಗಿ ತ್ಯಾಗಿಯಾಗಿ
ಅನ್ನ ನೀಡುತಿರುವನು

ಎತ್ತು ಎರಡು ಅವನ ಜೋಡು
ಕೂಡಿ ದುಡಿವ ಗೆಳೆಯರು
ಹಿಗ್ಗು ಕುಗ್ಗು ಏನೇ ಇರಲಿ
ಹೊಂದಿಕೊಂಡು ನಡೆವರು



– ಚನ್ನಬಸಪ್ಪ ಹೊಸಮನಿ

ನಮಗೆ ಗೊತ್ತಿರುವ ಹಾಡುಗಳನ್ನು ಗೆಳೆಯರೊಂದಿಗೆ ಹಂಚಿಕೊಳ್ಳೋಣ.

© KTBS NOT TO BE REPUBLISHED

1

## 1.3 ನನ್ನ ಆಯ್ಕೆಯ ಹಾಡು

3T

**ಹಿರಿಯರ ಸಹಾಯದಿಂದ ಪದ್ಯಗಳನ್ನು ಆಲಿಸೋಣ. ಅಭಿನಯದೊಂದಿಗೆ ನಾವೂ ಹಾಡಿ ಆನಂದಿಸೋಣ.**

# ಚಳಿ ಇರಲಿ ಮಳೆ ಬರಲಿ

ಚಳಿ ಇರಲಿ ಮಳೆ ಬರಲಿ
ಮಂಜು ಸುರಿಯುತಲಿರಲಿ
ಬಿಸಿಲು ಕುದಿಸುತಲಿರಲಿ
ಮುಮ್ಮುಖದ ಋತುಮಾನ
ಹೇಗು ಇರಲಿss
ನಗುತ ಒಲಿವೆವು ನಾವು
ನಗುತ ಒಲಿಸುವೆವು

ಏನೆ ಕಷ್ಟವು ಬರಲಿ;
ಎಂಥ ನಷ್ಟವೆ ಇರಲಿ
ಇಷ್ಟವು ಅನಿಷ್ಟವೂ
ಕೂಡಿ ಬರಲಿss
ದುಮ್ಮಾನ ಕಳೆವಂತೆ ಸುಮ್ಮಾನ
ಹೊಳೆವಂತೆ
ಹಾಡಿ ನಲಿವೆವು ನಾವು
ಹಾಡಿ ನಲಿಸುವೆವುsss

–ದ.ರಾ.ಬೇಂದ್ರೆ



NOT TO BE REPUBLISHED @KTBS

**ವಿವಿಧ ಹಾಡುಗಳನ್ನು ಶಿಕ್ಷಕರಿಂದ ಅಥವಾ ಹಿರಿಯರಿಂದ ಆಲಿಸಿ, ಸಂತಸಪಡೋಣ. ನಮಗಿಷ್ಟವಾದ ಹಾಡನ್ನು ಕಲಿತು, ಇತರರ ಎದುರು ಹಾಡೋಣ.**

1

## 1.4 ನಾ ಮೆಚ್ಚಿದ ಹಾಡು

2T

ನಮಗಿಷ್ಟವಾದ ಹಾಡು ಯಾವುದು ಎಂದು ಗೆಳೆಯರಿಗೆ ತಿಳಿಸೋಣ. ಆ ಹಾಡು ಏಕೆ ಇಷ್ಟವಾಯಿತು ಎನ್ನುವುದನ್ನು ವಿವರಿಸೋಣ.

ಮಣಿ, ಇಂದು ಟೀಚರ್ ಎಷ್ಟೆಲ್ಲಾ ಹಾಡುಗಳನ್ನು ಹೇಳಿ ಕೊಟ್ರು ಅಲ್ವಾ?

ಹೌದು, ಒಂದಕ್ಕಿಂತ ಒಂದು ಚೆನ್ನಾಗಿದ್ದವು ರಿಂಕು. ನೀನು ಹಾಡಿದ ಚಿಟ್ಟೆ ಹಾಡು ನನಗೆ ತುಂಬಾ ಇಷ್ಟ ಆಯ್ತು.

ಹೌದಾ, ನಿನಗ್ಯಾಕೆ ಚಿಟ್ಟೆ ಹಾಡು ತುಂಬಾ ಇಷ್ಟ ಆಯ್ತು?



ಕೇಳು ಹೇಳ್ತೀನಿ. ಚಿಟ್ಟೆಯ ಬಣ್ಣ, ಅದು ಹೂವಿನ ಮೇಲೆ ಕುಳಿತುಕೊಳ್ಳುವ ರೀತಿ ನಂಗೆ ತುಂಬಾ ಇಷ್ಟ ಆಯ್ತು. ನಿನಗ್ಯಾವ ಹಾಡು ಇಷ್ಟ ಆಯ್ತು?



ನಂಗೆ ಚಳಿ ಇರಲಿ ಮಳೆ ಇರಲಿ ಹಾಡು ತುಂಬಾ ಇಷ್ಟ ಆಯ್ತು?

ಏಕೆ?

ಯಾಕಂದ್ರೆ ______________________

______________________________

______________________________

ಶಾಲೆ/ಸುತ್ತಮುತ್ತಲಿನ ಪರಿಸರದಲ್ಲಿ ಸಿಗುವ ಹಾಡುಗಳಲ್ಲಿ, ನಮ್ಮ ಇಷ್ಟದ ಹಾಡುಗಳನ್ನು ಸಂಗ್ರಹಿಸಿ, ಹಾಡಿನ ಆಲ್ಬಂ ತಯಾರಿಸೋಣ. ಅವುಗಳ ಬಗ್ಗೆ ಗೆಳೆಯರ ಎದುರು ಮಾತನಾಡೋಣ.

@KTBS NOT TO BE REPUBLISHED

1

# 1.5 ಹಾಡು–ಚಿತ್ರಗಳ ಸಂಬಂಧ

2T

ಪದ್ಯವನ್ನು ಓದೋಣ. ಪದ್ಯದ ಭಾಗಕ್ಕೆ ಸರಿ ಹೊಂದುವ ಚಿತ್ರವನ್ನು ಗೆರೆ ಎಳೆದು ಜೋಡಿಸೋಣ.
ಪದ್ಯದ ಕುರಿತು ನಮ್ಮದೇ ಮಾತುಗಳಲ್ಲಿ ಗೆಳೆಯರಿಗೆ ಹೇಳೋಣ.

1

ಕೋಳಿ ಕೂಗಿತೇಳು ಕಂದ!
ಸೂರ್ಯ ಪೂರ್ವದಲ್ಲಿ ಬಂದ
ಹೆಚ್ಚು ಮಲಗಲೇನು ಚೆಂದ?
ಬಾ! ಕಂದ ಬಾ!
ಟಿಕ್! ಟಾಕ್! ಟಿಕ್! ಟಾಕ್ !
ಟಿಕ್! ಟಿಕ್! ಟಿಕ್!



2

ಹಲ್ಲನುಜ್ಜಿ ತಿಂಡಿ ತಿಂದು
ಪಾಠ ಓದಿ ಬಳಿಕ ನಿಂದು
ಊಟ ಮಾಡಿ ಶಾಲೆಗೆಂದು
ಬಾ! ಕಂದ ಬಾ!
ಟಿಕ್! ಟಾಕ್! ಟಿಕ್! ಟಾಕ್!
ಟಿಕ್! ಟಿಕ್! ಟಿಕ್!




3

ಶಾಲೆ ಮುಗಿದ ಬಳಿಕ ಓಟ
ಸಂಜೆವರೆಗೆ ಆಟ ಪಾಠ
ಮನೆಗೆ ಬಂದು ಸ್ತೋತ್ರ ಪಾಠ
ಬಾ! ಕಂದ ಬಾ!
ಟಿಕ್! ಟಾಕ್! ಟಿಕ್! ಟಾಕ್!
ಟಿಕ್! ಟಿಕ್! ಟಿಕ್!



4

ರಾತ್ರೆ ದೇವಗಡ್ಡ ಬಿದ್ದು
ಊಟ ಮಾಡಿ ನಿದ್ರಿಸಿದ್ದು
ನಾಳೆ ತಿರುಗಿ ಬೇಗನೆದ್ದು
ಬಾ! ಕಂದ ಬಾ!
ಟಿಕ್! ಟಾಕ್! ಟಿಕ್! ಟಾಕ್!
ಟಿಕ್! ಟಿಕ್! ಟಿಕ್!


ಜಿ.ಪಿ.ರಾಜರತ್ನಂ





ನಾವು ಆಲಿಸಿದ ಹಾಡುಗಳಲ್ಲಿರುವ ವಿಷಯಗಳನ್ನು ಗೆಳೆಯರೊಂದಿಗೆ ಹಂಚಿಕೊಳ್ಳೋಣ

NOT TO BE REPUBLISHED @KTBS

1

## 1.6 ಹೊಂದಿಸು

2T

ಪದ್ಯದ ಚರಣಗಳಿಗೆ ಸರಿ ಹೊಂದುವ ವಾಕ್ಯಗಳನ್ನು ಗೆರೆ ಎಳೆದು ಹೊಂದಿಸೋಣ.

### ಬಾರೆಲೆ ಹಕ್ಕಿ ಬಣ್ಣದ ಹಕ್ಕಿ

ಬಾರೆಲೆ ಹಕ್ಕಿ ಬಣ್ಣದ ಹಕ್ಕಿ
ಬಾರೆಲೆ ಹಕ್ಕಿ ಹಾರುವ ಹಕ್ಕಿ
ಗೆಳೆಯರು ಆಡಲು ಯಾರೂ ಇಲ್ಲ
ಕಳೆಯುವುದೆಂತು ವೇಳೆಯನೆಲ್ಲ
ಬಾ ಬಾ ನನಗೂ ಹಾಡನು ಕಲಿಸು
ಬಾ ಬಾ ನನಗೂ ಹಾರಲು ಕಲಿಸು

ಅವ್ವನು ನೀರಿಗೆ ಹೋಗಿಹಳು
ಅಪ್ಪನು ಪೇಟೆಗೆ ಹೋಗಿಹನು
ಅವ್ವನು ಬರಲಿ ಅಪ್ಪನು ಬರಲಿ
ತಿನ್ನಲು ಹಣ್ಣನು ಕೊಡಿಸುವೆನು

ನನಗೂ ಎರಡು ರೆಕ್ಕೆಯ ಹಚ್ಚು
ಹಿಂಗಡೆ ಬಣ್ಣದ ಪುಚ್ಛವ ಚುಚ್ಚು
ನೆತ್ತಿಯ ಮೇಲೆ ಜುಟ್ಟನು ಹಚ್ಚು
ಮೆಲ್ಲನೆ ಮೇಲೆ ಹಾರಲು ಹಚ್ಚು

ನಾನೂ ನೀನೂ ಇಬ್ಬರೂ ಕೂಡಿ
ಮುಗಿಲಿನ ಕಡೆಗೆ ಹಾರುವ ಬಾ
ಅಲ್ಲಿಂದಿತ್ತ ಇಲ್ಲಿಂದತ್ತ
ಹಾರುತ ಹಾಡುತ ನಲಿಯುವ ಬಾ

–ಸಿ.ಪ.ಕಟ್ಟಿಮನಿ

ಕವಿಗೆ ಹಕ್ಕಿಯಂತೆ ತಾನೂ ರೆಕ್ಕೆ, ಪುಚ್ಛ, ಜುಟ್ಟನ್ನು ಹೊಂದುವ ಆಸೆ.

ಬಣ್ಣದ ಹಕ್ಕಿಯನ್ನು ನೋಡಿದ ಕವಿ ಹಕ್ಕಿಯನ್ನು ಕರೆದು ಹಾಡನ್ನು ಕಲಿಸಲು ಕೇಳಿಕೊಳ್ಳುತ್ತಾನೆ.

ಕವಿಗೆ ತಾನು ಮತ್ತು ಹಕ್ಕಿ ಇಬ್ಬರೂ ಕೂಡಿ ಮುಗಿಲಲ್ಲಿ ಹಾರುತ್ತಾ, ಹಾಡುತ್ತಾ, ನಲಿಯುವ ಆಸೆ.

ಕವಿಗೆ ಅಪ್ಪ, ಅಮ್ಮ ಬಂದಾಗ ಹಕ್ಕಿಗೆ ತಿಂಡಿ ಕೊಡಿಸುವ ಆಸೆ.

ಈ ಮೇಲಿನ ನಾಲ್ಕೂ ಹೇಳಿಕೆಗಳಲ್ಲಿ ನಮಗೆ ಇಷ್ಟವಾದ ಒಂದು ಹೇಳಿಕೆಯನ್ನು ನೋಟ್‌ಬುಕ್‌ನಲ್ಲಿ ಬರೆಯೋಣ. ಅದು ಏಕೆ ಇಷ್ಟವಾಯಿತು ಎಂದು ಗೆಳೆಯರಿಗೆ ತಿಳಿಸೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

@KTBS NOT TO BE REPUBLISHED

1

## 1.7 ನನ್ನ ಅನಿಸಿಕೆ

3T

ಈ ಪದ್ಯವನ್ನು ಓದೋಣ. ಕವಿಯ ಕಲ್ಪನೆಯನ್ನು ಊಹಿಸಿ ಹೇಳೋಣ.

### ಚಿಟ್ಟೆ

ಚಿಟ್ಟೆ ಚಿಟ್ಟೆ
ಚಂದದ ಚಿಟ್ಟೆ
ಕೊಟ್ಟವರ‍್ಯಾರೇ
ಬಣ್ಣದ ಬಟ್ಟೆ?

ಮುಟ್ಟಲು ಬಂದರೆ
ತಟ್ಟನೆ ಹಾರಿ
ದೂರಕೆ ಓಡುವೆ
ಏತಕೆ ಪೋರಿ?

ಸುಮ್ಮನೆ ನನ್ನಲಿ
ತೋರುವೆ ಸಿಟ್ಟು
ಹೂವಿನ ಹತ್ತಿರ
ಏನದುಗುಟ್ಟು?

ಬಾ ಬಾ ಒಳಗೆ
ಕೊಡುವೆನು ನಾನು
ಬಿಸಿ ಬಿಸಿ ದೋಸೆ
ಸಿಹಿ ಸಿಹಿ ಜೇನು



– ಡಾ.ಪಿ.ನಾರಾಯಣ ಭಟ್

@KTBS NOT TO BE REPUBLISHED

- ಪದ್ಯದಲ್ಲಿರುವ ಪ್ರಾಸಪದಗಳನ್ನು ಬರೆಯೋಣ.

__________ __________ __________

__________ __________ __________

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

1

# 1.8 ಮಾಹಿತಿ ಸಂಪದ

3T

ಹಾಡುಗಳ ಕೆಲವು ವಿಧಗಳನ್ನು ಇಲ್ಲಿ ನೀಡಿದೆ. ಹಿರಿಯರ ಸಹಾಯದಿಂದ ಈ ಪಟ್ಟಿಯನ್ನು ಪೂರ್ಣಗೊಳಿಸೋಣ.

| ಕ್ರ.ಸಂ | ಹಾಡಿನ ವಿಧಗಳು | ಆಲಿಸಿದ್ದೇನೆ (ಕೇಳಿದ್ದೇನೆ) | ಆಲಿಸಿಲ್ಲ (ಕೇಳಿಲ್ಲ) | ಆಲಿಸಿದ್ದರೆ.. (ಕೇಳಿದ್ದರೆ..) | |
|---|---|---|---|---|---|
| | | | | ಇಷ್ಟವಾಗಿದೆ | ಇಷ್ಟವಾಗಿಲ್ಲ |
| 1 | ಶಿಶುಗೀತೆ | | | | |
| 2 | ಜಾನಪದ ಗೀತೆ | | | | |
| 3 | ದೇಶಭಕ್ತಿ ಗೀತೆ | | | | |
| 4 | ಭಕ್ತಿಗೀತೆ | | | | |
| 5 | ಭಾವಗೀತೆ | | | | |
| 6 | ಚಲನಚಿತ್ರ ಗೀತೆ | | | | |
| 7 | ಶಿಶುನಾಳ ಷರೀಫರ ಗೀತೆ | | | | |
| 8 | ತತ್ವ ಪದಗಳು | | | | |
| 9 | ಭಜನೆ | | | | |
| 10 | ರಂಗ ಗೀತೆ | | | | |
| 11 | ಲಾವಣಿ ಪದ | | | | |
| 12 | ಯಕ್ಷಗಾನದ ಹಾಡು | | | | |

@KTBS NOT TO BE REPUBLISHED

ಇವುಗಳಲ್ಲಿ ನಮಗಿಷ್ಟವಾದ ಹಾಡಿನ ವಿಧಗಳ ಕುರಿತು ಗೆಳೆಯರು ಅಥವಾ ಹಿರಿಯರೊಂದಿಗೆ ಹಂಚಿಕೊಳ್ಳೋಣ.

# 1.9 ನನ್ನ ಚಿತ್ರ

ಇಷ್ಟವಾದ ಯಾವುದಾದರೂ ಒಂದು ಪದ್ಯವನ್ನು ಚಿತ್ರದ ಮೂಲಕ ತೋರಿಸೋಣ. ಏಕೆ ಇಷ್ಟವಾಯಿತು ಎನ್ನುವುದನ್ನು ಗೆಳೆಯರಿಗೆ ವಿವರಿಸೋಣ.

@KTBS
NOT TO BE REPUBLISHED

ನಮಗಿಷ್ಟವಾದ ಬೇರೆ ಬೇರೆ ಹಾಡಿನ ಬಗ್ಗೆ ಚಿತ್ರ ಬಿಡಿಸಲು ಪ್ರಯತ್ನಿಸೋಣ.

1

# 1.10 ಕಾಮನಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



2. ಸುಳಿವು ಅಕ್ಷರಗಳನ್ನು ಬಳಸಿ, ಪದಗಳನ್ನು ಪೂರ್ಣಗೊಳಿಸಿ ಓದೋಣ.
ಸುಳಿವು: ಕೆ, ಇ, ಗ, ರು, ಡ, ಹೊ, ಸು, ವೆ, ಬ




ನಮಗಿಷ್ಟವಾದ ಯಾವುದೇ ಹಾಡಿನ ಅರ್ಥವನ್ನು ಹಿರಿಯರಿಂದ ಕೇಳೋಣ.




NOT TO BE REPUBLISHED @KTBS

1

## 1.10 ಕಾಮನಬಿಲ್ಲು

ಮುಂದುವರೆದಿದೆ....

3

### 3. ಪದದೊಳಗಿನ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ರಚಿಸೋಣ.

**ಸುರಿಯುತಲಿರಲಿ**

........................................................................................................

........................................................................................................

........................................................................................................

### 4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ ☐

✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

# 2

## 2.1 ನಾನೂ ಮಾತನಾಡುವೆ

ಈ ಚಿತ್ರ ಕುರಿತು ಗೆಳೆಯರೊಂದಿಗೆ ಅಭಿಪ್ರಾಯವನ್ನು ಹಂಚಿಕೊಳ್ಳೋಣ.



### ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಈ ಚಿತ್ರ ಸನ್ನಿವೇಶವನ್ನು ನೀನು ಎಲ್ಲಿ ನೋಡಿರುವೆ?
2. ಇಲ್ಲಿ ಏನು ನಡೆಯುತ್ತಿದೆ ? ಎಂದು ಊಹಿಸಿ ಹೇಳು.
3. ನೀನು ಬಸ್‌ನಲ್ಲಿ ಪ್ರಯಾಣಿಸಿದ ಸಂದರ್ಭದಲ್ಲಿ ನಿನಗಾದ ಅನುಭವಗಳನ್ನು ಗೆಳೆಯರೊಂದಿಗೆ ಹಂಚಿಕೊ.

ನನ್ನ ಮಾತುಗಳಿಗೆ ನಾನು ಬಣ್ಣ ಹಚ್ಚುವ ಸ್ಟಾರ್‌ಗಳು.

☆ ☆ ☆ ☆ ☆

@KTBS NOT TO BE REPUBLISHED

2

## 2.2 ಅಜ್ಜನ ಜೊತೆ ಒಂದು ದಿನ

2T

ಇಲ್ಲಿನ ಸಂಭಾಷಣೆಯನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸೋಣ.



ಗೀತಾ : ತಾತ, ಈ ವೇಷಧಾರಿಗಳ ಕುಣಿತ ನೋಡಲು ಎಂಥಾ ಚಂದ!

ತಾತ : ಹೌದು, ಹಾಗಾಗಿಯೇ, ಕುಣಿತ ನೋಡಲು ಬಹಳ ಜನ ಸೇರಿರುವುದು.

ಸುರೇಶ : ತಾತ, ಎಷ್ಟೊಂದು ಎತ್ತರಕ್ಕೆ ಕೋಲು ಕಟ್ಟಿ ನಡೆಯುತ್ತಾರೆ!

ಗೀತಾ : ಅಷ್ಟೇ ಅಲ್ಲ ತಾತ, ಕೆಳಗೆ ಬೀಳದಂತೆ ಕುಣಿಯುತ್ತಾರೆ ಅಲ್ವ?

ತಾತ : ಹೌದು, ಇದು ಒಂದು ವಿಶಿಷ್ಟ ಜಾನಪದ ಕಲೆ. ಇದನ್ನು ಮರಕಾಲು ಕುಣಿತ ಎಂದು ಕರೆಯುತ್ತಾರೆ

**ಪ್ರಶ್ನೆಗಳು:**

1. ಯಾರ ಯಾರ ನಡುವೆ ಈ ಸಂಭಾಷಣೆ ನಡೆಯುತ್ತಿದೆ?
2. ಇವರು ಯಾವ ವಿಷಯದ ಕುರಿತು ಮಾತನಾಡುತ್ತಿದ್ದಾರೆ?
3. ಈ ಸಂಭಾಷಣೆಯನ್ನು ನಿಮ್ಮದೇ ಮಾತುಗಳಲ್ಲಿ ಹೇಳಿ.
4. ಈ ತರಹದ ಇತರೆ ವೇಷಾಧಾರಿ ಕುಣಿತಗಳ ಬಗ್ಗೆ ನಿಮ್ಮ ಸ್ನೇಹಿತರು ಅಥವಾ ಹಿರಿಯರೊಂದಿಗೆ ಚರ್ಚಿಸಿ.

# 2.3 ಮಾತಿನ ಮಂಟಪ

2T

ಕೈಗೊಂಬೆ ಅಥವಾ ಪಪೆಟ್ ಬಳಸಿ ಶಿಕ್ಷಕರ ಸಹಾಯದಿಂದ ಈ ಸಂಭಾಷಣೆಯಲ್ಲಿ ತೊಡಗೋಣ. ನೀಡಿದ ಸ್ಥಳದಲ್ಲಿ ನಮ್ಮದೇ ಸಂಭಾಷಣೆಯನ್ನು ಊಹಿಸಿ ಹೇಳೋಣ.

ರಾಜು, ಏಕೆ ತಡ ಮಾಡಿದೆ?

ಚುಟುಕಿ, ನಾನು ಬರುವಾಗ ದಾರಿಯಲ್ಲಿರುವ ಮರದ ಮೇಲೆ ಒಂದು ಸುಂದರವಾದ ಹಕ್ಕಿ ಇತ್ತು. ಅದನ್ನು ನೋಡುತ್ತ ನಿಂತಿದ್ದೆ. ಅದಕ್ಕೆ ತಡವಾಯಿತು.

ಹ್ಹಾಂ ನೆನಪಾಯಿತು. ನಮ್ಮ ಮಂಡಗದ್ದೆ ಪಕ್ಷಿಧಾಮಕ್ಕೆ ತುಂಬಾ ಹಕ್ಕಿಗಳು ಬಂದಿವೆಯಂತೆ.

ಹಾಗಾದರೆ ಇವತ್ತು ಪಕ್ಷಿಧಾಮ ನೋಡಲು ಹೋಗೋಣ್ವಾ?

ಸರಿ ಹೋಗೋಣ. ಪಕ್ಷಿಧಾಮಕ್ಕೆ ಇಲ್ಲಿಂದ 4ಕಿಲೋ ಮೀಟರ್.

ಬಸ್ಸು ಬಂತು ನೋಡು. ನಡಿ, ಬೇಗ ಹೋಗಿ ಬರೋಣ.

ಮಂಡಗದ್ದೆ ಬಂತು. ಅಲ್ಲಿ ನೋಡು. ಸೂಚನಾ ಫಲಕ ಕಾಣ್ತಾ ಇದೆ.

@KTBS NOT TO BE REPUBLISHED

2

## 2.3 ಮಾತಿನ ಮಂಟಪ

ಮುಂದುವರೆದಿದೆ..

2T

ಹ್ಹಾಂ! ಇದರಲ್ಲಿ ಇರುವ ಹಕ್ಕಿಯನ್ನೇ ನಾನು ನೋಡಿದ್ದು.




ಮಂಡಗದ್ದೆ ಪಕ್ಷಿಧಾಮ
ವೀಕ್ಷಣಾ ಸಮಯ:
ಬೆಳಿಗ್ಗೆ 6 ರಿಂದ ಸಾಯಂಕಾಲ 6 ಗಂಟೆವರೆಗೆ
ಅವಧಿ: ಜೂನ್‌ನಿಂದ ನವೆಂಬರ್

ಇದು ತುಪ್ಪಳ ಹಕ್ಕಿ. ನಡಿ, ಒಳಗೆ ಹೋಗೋಣ.

ಆರು ಗಂಟೆ ಒಳಗೆ ವಾಪಸ್ ಬರಬೇಕು. ಬೇಗ ನಡೆ.

ಬನ್ನಿ ಮಕ್ಕಳೇ, ಒಳಗಡೆ ಯಾರೂ ಮಾತನಾಡದೇ ಸುಮ್ಮನೆ ನೋಡಬೇಕು. ಹೀಗೆ ಮುಂದೆ ನೇರವಾಗಿ ಸಾಗಿ ಬಲಕ್ಕೆ ತಿರುಗಿದರೆ ಕೆಲವೊಂದು ನವಿಲುಗಳು ಕಾಣುತ್ತವೆ. ಅಲ್ಲಿಂದ ಸ್ವಲ್ಪ ಮುಂದೆ ಹೋದರೆ ಕೆರೆ ಸಿಗುತ್ತದೆ. ಅಲ್ಲೇ ಕೆರೆಯಲ್ಲಿರುವ ಮರಗಳ ಮೇಲೆ ಹಕ್ಕಿಗಳು ಇರುತ್ತವೆ.

ಈ ತುಪ್ಪಳ ಹಕ್ಕಿ ಸಮುದ್ರದಲ್ಲಿರುವ ಬಿಳಿ ಕೊಕ್ಕರೆ. ಇವು ಇಲ್ಲಿಗೆ ವಲಸೆ ಬರುತ್ತವೆ. ಈ ಹಕ್ಕಿಗಳು ಜೂನ್‌ನಿಂದ ನವೆಂಬರ್‌ನಲ್ಲಿ ಮಾತ್ರ ಇರುತ್ತವೆ. ಇವು ಇಲ್ಲಿಗೆ ಮೊಟ್ಟೆ ಇಟ್ಟು ಮರಿ ಮಾಡಲು ಬರುತ್ತವೆ. ಇದರ ಮುಖ್ಯ ಆಹಾರ ಮೀನು.

ಅಂದ ಹಾಗೆ ನಾವೀಗ ಮರಳಿ ಹೋಗೋಣ. ಹೀಗೆ ನೇರವಾಗಿ ವಾಪಸ್ ಬಂದ ದಾರಿಯಲ್ಲೇ ಹೋದರೆ ನವಿಲುಗಳು ಸಿಗುತ್ತವೆ. ಅಲ್ಲೆ ಎಡಕ್ಕೆ ತಿರುಗಿ ಹಾಗೇ ಮುಂದೆ ಸಾಗಿದರೆ ಪ್ರವೇಶ ದ್ವಾರ ಸಿಗುತ್ತೆ. ಅಲ್ಲಿಂದ ಬಸ್ ಹತ್ತಿ ಹೋಗೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

©KTBS NOT TO BE REPUBLISHED

## 2.4 ಚಿತ್ರ ಸಂಭಾಷಣೆ



ಸರಣಿ ಚಿತ್ರ ಕಥೆಯಲ್ಲಿನ ಮುಂದುವರೆದ ಸಂಭಾಷಣೆಯನ್ನು ಊಹಿಸಿ ಹೇಳೋಣ.



ಒಂದು ಊರಿನಲ್ಲಿ ಇಲಿಗಳ ಸಂಸಾರವಿತ್ತು. ಆ ಇಲಿಗಳಿಗೆ ಏಳು ಬಾಲಗಳಿರುವ ಮರಿ ಇಲಿ ಇತ್ತು.



ಆ ಮರಿ ಇಲಿ ಒಂದು ದಿನ ಶಾಲೆ ಕಲಿಯಲು ಹೋಯಿತು...

©KTBS NOT TO BE REPUBLISHED



ಇಲಿಯ ಗೆಳೆಯರು

ಗೆಳೆಯ–1:

ಗೆಳೆಯ–2:

ಗೆಳೆಯ–3:

ಗೆಳೆಯ–4:



ಮರಿ ಇಲಿ:

ಅಮ್ಮ ಇಲಿ:

2

# 2.4 ಚಿತ್ರ ಸಂಭಾಷಣೆ

ಮುಂದುವರೆದಿದೆ..

3T




ಅಮ್ಮ ಇಲಿ:
ದರ್ಜಿ ಇಲಿ:
ಮರಿ ಇಲಿ:



ಇಲಿಯ ಗೆಳೆಯರು:
ಮರಿ ಇಲಿ:



ಮರಿ ಇಲಿ:
ಅಮ್ಮ ಇಲಿ:




ಮರಿ ಇಲಿ:
ದರ್ಜಿ ಇಲಿ:



ಮರಿ ಇಲಿ:
ಇಲಿಯ ಗೆಳೆಯರು:

**ಶಿಕ್ಷಕರಿಗೆ ಸೂಚನೆ:** ಶಿಕ್ಷಕರು ಮಾದರಿಗಾಗಿ ಮಾತ್ರ ಬಳಸಿಕೊಂಡು ಮಕ್ಕಳಿಗೆ ಇದರ ಆಧಾರದ ಮೇಲೆ ತಮ್ಮದೇ ಸಂಭಾಷಣೆಗೆ ಅವಕಾಶ ಮಾಡಿಕೊಡುವುದು.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

©KTBS NOT TO BE REPUBLISHED

2

## 2.5 ಕಥೆ ಓದು, ಸಂಖ್ಯೆ ನೀಡು

3

ಹಿಂದಿನ ಪುಟದ ಚಿತ್ರಕಥಾ ಸರಣಿಗೆ ಸರಿಹೊಂದುವಂತೆ ಸಂಭಾಷಣೆಗೆ ಅನುಕ್ರಮ ಸಂಖ್ಯೆ ನೀಡೋಣ.

| | |
|---|---|
| ಅಮ್ಮ ಇಲಿ : "ದರ್ಜಿ ಅಣ್ಣ ನಿಮ್ಮ ಹತ್ತಿರ ಇರುವ ಕತ್ತರಿಯಿಂದ ಇವನ ಬಾಲಗಳನ್ನು ಕತ್ತರಿಸುತ್ತೀರಾ?<br>ಮರಿ ಇಲಿ : ಅಮ್ಮ ಒಂದು ಬಾಲ ಬಿಟ್ಟು ಉಳಿದ ಬಾಲ ಕತ್ತರಿಸಲು ಹೇಳಿ. ನಾನು ಅವರಂತೆ ಕಾಣಬೇಕು<br>ದರ್ಜಿ ಇಲಿ : ಹೌದಾ! ನೋವಾಗುತ್ತದೆ ತಾಳಬೇಕು. | |
| ಮರಿ ಇಲಿ : ಅಮ್ಮ ನನ್ನ ಬಾಲ ಉದ್ದವಿದೆ ಎಂದು ತಮಾಷೆ ಮಾಡುತ್ತಾರೆ ನೋಡಮ್ಮ.<br>ಅಮ್ಮ ಇಲಿ : ಹಾಗಾದರೆ ಮತ್ತೆ ದರ್ಜಿ ಹತ್ತಿರ ಹೋಗಿ ಬಾಲವನ್ನು ಚಿಕ್ಕದು ಮಾಡಿಸಿಕೊಂಡು ಬಾ ಹೋಗು. | |
| ಗೆಳೆಯ–1 : ಇಲ್ಲಿ ನೊಡಿ ಅಬ್ಬಾ! "ಎಷ್ಟೊಂದು ಬಾಲಗಳಿವೆ".<br>ಗೆಳೆಯ–2 : "ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು ಬಾಲಗಳಿವೆ."<br>ಗೆಳೆಯ–3 : "ಅಹಾ! ಎಷ್ಟು ನಯವಾಗಿವೆ."<br>ಗೆಳೆಯ–4 : "ನಾವೆಲ್ಲ ಬಾಲ ಹಿಡಿದು ಜೋಕಾಡೋಣವೆ?" | |
| ಮರಿ ಇಲಿ : "ದರ್ಜಿ ಮಾಮ, ನಿಮ್ಮ ಹತ್ತಿರ ಇರುವ ಕತ್ತರಿಯಿಂದ ನನ್ನ ಬಾಲವನ್ನು ಚಿಕ್ಕದು ಮಾಡುತ್ತೀರಾ?<br>ದರ್ಜಿ ಇಲಿ : ಹೌದಾ! ಸರಿ ಬಾ ಹಾಗಾದರೆ ಈಗಲೆ ಮಾಡ್ತೀನಿ ಇರು. | |
| ಮರಿ ಇಲಿ : "ಅಮ್ಮಾ ಶಾಲೆಯಲ್ಲಿ ಎಲ್ಲರೂ ನನ್ನ ಬಾಲಗಳನ್ನು ನೋಡಿ ನಗಾಡ್ತಾರೆ.<br>ಅಮ್ಮ ಇಲಿ : "ಪುಟ್ಟಾ ಹಾಗಾದರೆ ನಿನ್ನ ಬಾಲಗಳನ್ನು ದರ್ಜಿ ಹತ್ತಿರ ಹೋಗಿ ಕತ್ತರಿಸೋಣವೆ? | |
| ಮರಿ ಇಲಿ : ನನ್ನ ಬಾಲ ನೋಡಿ ನಿಮ್ಮ ಹಾಗೆ ಎಷ್ಟು ಚೆನ್ನಾಗಿದೆ.<br>ಇಲಿಯ ಗೆಳೆಯರು : ಹೌದು! ಹೌದು! ನಮ್ಮ ಹಾಗೆ ಇದೆ. ಬನ್ನಿ ಎಲ್ಲಾರೂ ಸೇರಿ ಕುಣಿಯೋಣ. | |
| ಮರಿ ಇಲಿ : ನನಗೂ ನಿಮ್ಮ ಹಾಗೆ ಒಂದೇ ಬಾಲವಿದೆ.<br>ಇಲಿಯ ಗೆಳೆಯರು : ಉದ್ದ ಬಾಲದವ ಬಂದ, ಉದ್ದ ಬಾಲದವ ಬಂದ | |
| ಆ ಇಲಿ ಮರಿ ಒಂದು ದಿನ ಶಾಲೆ ಕಲಿಯಲು ಹೋಯಿತು... | |

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

2

## 2.6 ಚಿತ್ರ ನೋಡಿ ಮಾತನಾಡು

3

ಈ ಚಿತ್ರ ಕುರಿತು ಗೆಳೆಯರೊಂದಿಗೆ ವಿಷಯ ಹಂಚಿಕೊಳ್ಳೋಣ.




@KTBS NOT TO BE REPUBLISHED

**ಶಿಕ್ಷಕರಿಗೆ ಸೂಚನೆ:** ಚಿತ್ರಕ್ಕೆ ಪೂರಕವಾಗಿಯೇ ಚರ್ಚಿಸುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

2

# 2.7 ಗುಬ್ಬಿ ಮರಿಗಳು

3T

## ಸಂಭಾಷಣೆಯನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸೋಣ



**ಕುಮಾರ :** ಅಮ್ಮಾ.... ಅಮ್ಮಾ....

**ಅಮ್ಮ :** ಏನು ಕುಮಾರ?

**ಕುಮಾರ :** ಗುಬ್ಬಿಗಳು ಏನು ಮಾಡುತ್ತಿವೆ?

**ಅಮ್ಮ :** ನೋಡು ಮಗು, ಗುಬ್ಬಿಗಳು ನಮ್ಮ ಹಾಗೆ ಮನೆಯನ್ನು ಕಟ್ಟಿಕೊಳ್ಳುತ್ತಿವೆ.

**ಕುಮಾರ :** ಹಾಗಾದರೆ! ಮನೆ ಕಟ್ಟಲು ಬೇರೆಯವರು ಬರುವುದಿಲ್ಲವೆ?

**ಅಮ್ಮ :** ಇಲ್ಲ ಮಗು, ತಮ್ಮ ಮನೆಯನ್ನು ತಾವೇ ಮಾಡಿಕೊಳ್ಳುತ್ತವೆ. ಯಾರ ಸಹಾಯವೂ ಪಡೆಯುವುದಿಲ್ಲ.

**ಕುಮಾರ :** ಹೌದಮ್ಮ, ಹುಲ್ಲು, ತಂದು ಗೂಡು ಕಟ್ಟುತ್ತಿವೆ. ಅಮ್ಮಾ! ನಾನು ಅವುಗಳಿಗೆ ಏನಾದರೂ ಸಹಾಯ ಮಾಡಬೇಕೆನಿಸುತ್ತಿದೆ.

**ಅಮ್ಮ :** ಒಳ್ಳೆಯದು. ಏನು ಮಾಡಬೇಕೆಂದು ಯೋಚಿಸು.

(ಹಲವು ದಿನಗಳ ನಂತರ)

**ಕುಮಾರ :** ಅಮ್ಮಾ, ಗುಬ್ಬಿಗಳು ಈಗ ನನಗೆ ಸ್ನೇಹಿತರಾಗಿದ್ದಾರೆ.

**ಅಮ್ಮ :** ಹೌದಾ! ಅದು ಹೇಗೆ?

**ಕುಮಾರ :** ದಿನಾಲು ಗೋಡೆಯ ಕಿಟಕಿಯ ಮೇಲೆ ಬಟ್ಟಲಿನಲ್ಲಿ ನೀರನ್ನು, ತಟ್ಟೆಯಲ್ಲಿ ಅನ್ನವನ್ನು ಇಟ್ಟರೆ ಸಾಕು, ಬಂದು ಸೇರುತ್ತವೆ.

NOT TO BE REPUBLISHED

## 2.7 ಗುಬ್ಬಿ ಮರಿಗಳು

ಮುಂದುವರೆದಿದೆ..





**ಅಮ್ಮ** : ಹೌದಾ! ನಾನೂ ತಿನ್ನುತ್ತಿರುವುದನ್ನು ಗಮನಿಸಿದೆ.

**ಕುಮಾರ** : ಅಮ್ಮಾ, ಮೊದ ಮೊದಲು, ಗುಬ್ಬಿಗಳು ಹಿಂಜರಿಯುತ್ತಿದ್ದವು. ಬರುಬರುತ್ತ ಯಾವುದೇ ಭಯವಿಲ್ಲದೆ ನಾನು ಹೊರಗೆ ಬಂದರೆ ಹಾರಿ ಬಂದು ಅಂಗಳದಲ್ಲಿ ಸೇರುತ್ತವೆ.

**ಅಮ್ಮ** : ಹೌದಾ! ನನಗೆ ತುಂಬಾ ಖುಷಿಯಾಗುತ್ತಿದೆ. ಅವುಗಳ ಬಗೆಗೆ ಇನ್ನೂ ಏನು ಗಮನಿಸಿರುವೆ?

**ಕುಮಾರ** : ಗುಬ್ಬಿಗಳು ಗೂಡು ಕಟ್ಟುವುದನ್ನು, ಮೊಟ್ಟೆಯಿಟ್ಟು ಮರಿ ಮಾಡುವುದನ್ನು, ಮರಿಗಳಿಗೆ ಕಾಳು ತಿನ್ನಿಸುವುದನ್ನು ಗಮನಿಸಿದೆ.

**ಅಮ್ಮ** : ಓ! ಹಾಗಾದರೆ ಈಗ ಮರಿಗಳ ಪೋಷಣೆಯ ಜವಾಬ್ದಾರಿ ಗುಬ್ಬಿಗಳದ್ದಾಗಿದೆ.

**ಕುಮಾರ** : ಹೌದಮ್ಮ ಮರಿಗಳು ಗೂಡಿನಿಂದ ಹೊರಗೆ ಇಣುಕುತ್ತಿವೆ. ಗುಬ್ಬಿಗಳು ಕಾಳುಗಳನ್ನು ತಂದು ಮರಿಗಳಿಗೆ ತಿನ್ನಿಸುತ್ತವೆ.

**ಅಮ್ಮ** : ಗುಬ್ಬಿಗಳು ಕಾಳುಗಳನ್ನು ತಿನ್ನುವುದನ್ನು ನೋಡಿದೆಯಲ್ಲವೇ? ಬಾ ನೀನೂ ಊಟ ಮಾಡು. (ಹಲವು ದಿನಗಳ ನಂತರ)

**ಕುಮಾರ** : ಅಮ್ಮಾ! ಅಮ್ಮಾ!

**ಅಮ್ಮ** : ಏನಾಯಿತು, ಏಕೆ ಅಳುತ್ತಿರುವೆ?

**ಕುಮಾರ** : ಅಮ್ಮಾ, ಗುಬ್ಬಿಯೂ ಕಾಣುತ್ತಿಲ್ಲ, ಮರಿಗಳೂ ಕಾಣುತ್ತಿಲ್ಲ. ಎಲ್ಲಿಗೆ ಹೋದವು?

**ಅಮ್ಮ** : ಗುಬ್ಬಿಮರಿಗಳು ತಮ್ಮ ಆಹಾರವನ್ನು ತಾವೇ ಹುಡುಕಬೇಕಲ್ಲವೆ? ಆದ್ದರಿಂದ ಹಾರುವುದನ್ನು ಕಲಿತು ಹಾರಿಹೋದವು.

@KTBS NOT TO BE REPUBLISHED

## 2.7 ಗುಬ್ಬಿ ಮರಿಗಳು

ಮುಂದುವರೆದಿದೆ...



**ಕುಮಾರ :** ಹೌದಾ! ನನ್ನ ಎದುರಿನಲ್ಲಿಯೇ ಹುಟ್ಟಿ ಬೆಳೆದ ಗುಬ್ಬಿಮರಿಗಳು ಎಷ್ಟು ಬೇಗ ಸ್ವಾವಲಂಬಿ ಆದವು. ಅವುಗಳಂತೆಯೆ ನನ್ನ ಕೆಲಸ ನಾನೇ ಮಾಡಿಕೊಳ್ಳುವೆ.

(ಎಂದು ತನ್ನ ಚಿಕ್ಕ ಪುಟ್ಟ ಕೆಲಸಗಳನ್ನು ತಾನೇ ಮಾಡಿಕೊಳ್ಳತೊಡಗಿದ.)

**ಇವುಗಳಿಗೆ ಮೌಖಿಕವಾಗಿ ಉತ್ತರಿಸಿ.**

- ಕುಮಾರನಿಗೆ ಗುಬ್ಬಿಗಳು ಹೇಗೆ ಸ್ನೇಹಿತರಾದವು?
- ಗುಬ್ಬಿಗಳ ಗೂಡು ಏಕೆ ಖಾಲಿ ಆಗಿತ್ತು?

**ಈ ಕೆಳಗಿನ ಮಾತನ್ನು ಯಾರು ಹೇಳಿದರು ಎಂದು ಬರೆಯೋಣ.**

❈ ಹಾಗಾದರೆ! ಮನೆ ಕಟ್ಟಲು ಬೇರೆಯವರು ಬರುವುದಿಲ್ಲವೆ?

❈ ಒಳ್ಳೆಯದು. ಏನು ಮಾಡಬೇಕೆಂದು ಯೋಚಿಸು.

❈ ಓ! ಹಾಗಾದರೆ ಈಗ ಮರಿಗಳ ಪೋಷಣೆಯ ಜವಾಬ್ದಾರಿ ಗುಬ್ಬಿಗಳದ್ದಾಗಿದೆ.

❈ ಏನಾಯಿತು, ಏಕೆ ಅಳುತ್ತಿರುವೆ?

❈ ಗುಬ್ಬಿಯೂ ಕಾಣುತ್ತಿಲ್ಲ, ಮರಿಗಳೂ ಕಾಣುತ್ತಿಲ್ಲ. ಎಲ್ಲಿಗೆ ಹೋದವು?

| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

@KTBS NOT TO BE REPUBLISHED

## 2.8 ಕಥೆ ರಚಿಸು



**ವಾಕ್ಯಗಳನ್ನು ಅನುಕ್ರಮವಾಗಿ ಬರೆದು ಕಥೆ ರಚಿಸೋಣ.**

- ಆಗ ಗುಬ್ಬಿಗಳು ಅಂಗಳಕ್ಕೆ ಬಂದವು
- ಮರಿಗಳು ಗೂಡಿನಿಂದ ಹೊರಗೆ ಇಣುಕಿದವು.
- ಆಗ ಗುಬ್ಬಿಗಳು ಆಹಾರವನ್ನು ತಂದು ತಿನ್ನಿಸಿದವು.
- ಕುಮಾರನು  ಗುಬ್ಬಿಗಳಿಗೆ ನೀರು ಕೊಟ್ಟನು.
- ಮರಿಗಳಿಗೆ ರೆಕ್ಕೆ ಬಲಿತವು.
- ಆಗ ಅವನಿಗೆ ಸ್ನೇಹಿತರಾದವು.
- ಆಗ ಹಾರಿ ಹೋದವು.
- ಕುಮಾರನು ಕಾಳುಗಳನ್ನು ಚೆಲ್ಲಿದನು.

@KTBS
NOT TO BE REPUBLISHED

| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

2

# 2.9 ಕಾಮನ ಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



2. ಪದಗಳ ಅಕ್ಷರಗಳು ಬದಲಾಗಿವೆ. ಅವುಗಳನ್ನು ಸರಿಪಡಿಸಿ ಬರೆದು ಓದೋಣ.

| | | |
|---|---|---|
| ಣಿತಕು | ಸಂರಸಾ | ಶಿಷ್ಟವಿ |



| | | |
|---|---|---|
| ರಕಾಮಲು | ಧಾವೇರಿಷ | ಮಕ್ಷಿಧಾಪ |



✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

@KTBS NOT TO BE REPUBLISHED

2

# 2.9 ಕಾಮನ ಬಿಲ್ಲು

ಮುಂದುವರೆದಿದೆ....

3

3. ಈಗಾಗಲೇ ಗಮನಿಸಿರುವ ಸಂಭಾಷಣೆ ಹಾಗೂ ಕಥೆಗಳಲ್ಲಿಯ ಪದಗಳನ್ನು ಆಧರಿಸಿ ಪದ ಪಿರಾಮಿಡ್ ಪೂರ್ಣಗೊಳಿಸೋಣ.

ಅ) 'ನ್' ವ್ಯಂಜನ ಆಧರಿಸಿದೆ.

| | | | |
|---|---|---|---|
| ನಾ | | | |
| ಸು | ಮ್ಮ | | |
| ಜಾ | | ಪ | ದ |

ಅ) 'ಮ್' ವ್ಯಂಜನ ಆಧರಿಸಿದೆ.

| | | | |
|---|---|---|---|
| ಅ | | | |
| ಸ | | ದ್ರ | |
| ಪ | ಕ್ಷಿ | ಧಾ | |

@KTBS NOT TO BE REPUBLISHED

4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :

ದಿನಾಂಕ :

3

## 3.1 ನಾನೂ ಮಾತನಾಡುವೆ

2T

### ಚಿತ್ರ ಕುರಿತು ಗೆಳೆಯರೊಂದಿಗೆ ವಿಷಯ ಹಂಚಿಕೊಳ್ಳೋಣ



### ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಇಲ್ಲಿ ಎಷ್ಟು ಗಿಳಿಗಳಿವೆ? ಈ ಗಿಳಿಗಳು ಯಾವ ಹೊತ್ತಿನಲ್ಲಿ ಕುಳಿತಿವೆ?
2. ಮರದ ಮೇಲಿರುವ ಗಿಳಿಗಳು ಏನು ಮಾತಾಡುತ್ತಿರಬಹುದು? ಊಹಿಸಿ ಹೇಳು.
3. ಪಕ್ಷಿಗಳು ನಮಗೆ ಹೇಗೆ ಸಹಾಯ ಮಾಡುತ್ತವೆ ಎನ್ನುವುದನ್ನು ನಿನ್ನ ಗೆಳೆಯರೊಂದಿಗೆ ಹಂಚಿಕೊ.

- ನನ್ನ ಮಾತುಗಳು ನನಗೆ ಸಂತೋಷ ನೀಡಿವೆ. ☐
- ನಾನು ಇನ್ನೂ ಸ್ವಲ್ಪ ವಿಷಯ ಸೇರಿಸಿದ್ದರೆ ಇನ್ನೂ ಖುಷಿ ಆಗುತ್ತಿತ್ತು. ☐

3

## 3.2 ದಾರಿ ಹುಡುಕಿ ಪದಗಳನ್ನು ಓದು

2

ನರಿಗೆ ಕಾಡಿಗೆ ತಲುಪಲು ಗೆರೆ ಎಳೆದು ಸಹಾಯ ಮಾಡೋಣ.
ನರಿ ಹೋಗುವ ದಾರಿಯಲ್ಲಿ ಸಿಗುವ ಪದಗಳನ್ನು ಗಟ್ಟಿಯಾಗಿ ಓದೋಣ.




©KTBS NOT TO BE REPUBLISHED

ನರಿ ಹೋಗುವ ದಾರಿಯಲ್ಲಿ ಸಿಗುವ ಪದಗಳನ್ನು ಈ ಜಾಗದಲ್ಲಿ ಬರೆಯೋಣ.

## 3 — 3.3 ಪದರಚನೆ



ಹಿರಿಯರ ಸಹಾಯದಿಂದ ಬಣ್ಣದ ಮನೆಯಲ್ಲಿರುವ ಅಕ್ಷರಗಳನ್ನು ಜೋಡಿಸಿ ಪದ ರಚಿಸೋಣ.



| | | | | | | |
|---|---|---|---|---|---|---|
| ಓ | ಪ್ರಾ | ಪ್ರ | ಜ | ತಿ | ರ | ಕಂ |
| ರ | ಡ | ಣಿ | ಜ | ಬಿಂ | ಡ | ಹ |
| ಕ | ರಾ | ಪು | ಗ | ಬ | ಡಿ | ಕ್ಕಿ |
| ಶ | ಡಿ | ಳು | ಸೀ | ನ | ಯ | ಮ |
| ನ | ರಿ | ಗ | ದ | ಕ | ಆ | ಉ |
| ಕಾ | ಆ | ಅ | ಡು | ಲ | ಹಾ | ರ |
| ಉ | ಡು | ಕ್ಕಿ | ಪು | ಡು | ದು | ನ |
| ಚ | ಪಾ | ಕು | ಯ | ನಿಂ | ಹಾ | ಲ |



@KTBS NOT TO BE REPUBLISHED

ರಚಿಸಿದ ಪದಗಳನ್ನು ಖಾಲಿ ಜಾಗದಲ್ಲಿ ಬರೆದು ಗಟ್ಟಿಯಾಗಿ ಓದೋಣ.

| | | |
|---|---|---|
| | | |
| | | |
| | | |

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

3

## 3.4 ಸ್ಪಷ್ಟವಾಗಿ ಓದುವೆ

ಕೆಳಗಿನ ಸಾಲುಗಳನ್ನು ತಪ್ಪಿಲ್ಲದಂತೆ ಓದೋಣ.



ಒಂದು ದಿನ ಚಿನ್ನು ಸಂಜೆಯ **ಹೊತ್ತಿನಲ್ಲಿ** ರೀಕು ಜೊತೆ **ಹಾಲು** ಕುಡಿಯುತ್ತಾ ಮನೆಯ **ಹೊರಗೆ** ಕುಳಿತಿದ್ದಳು. ಆಕಾಶದಲ್ಲಿ **ಹಕ್ಕಿಗಳು** ಹಾರಾಡುತ್ತಿದವು. ಅವುಗಳನ್ನು ನೋಡಿ ಚಿನ್ನುವಿಗೆ **ಖುಷಿಯಾಯಿತು.** ತನ್ನ ಗೆಳೆಯರನ್ನೆಲ್ಲಾ ಕರೆದು **ಆಕಾಶ** ನೋಡಲು ತಿಳಿಸಿದಳು. ಎಲ್ಲರೂ **ಹೊರಗೆ ಓಡಿ** ಬಂದರು. ಹಕ್ಕಿಗಳು **ಹಾರಾಡುವುದನ್ನು** ನೋಡಿ ಆನಂದಿಸಿದರು. ನಂತರ ಗೆಳೆಯರ ಜೊತೆ ಸೇರಿ ಕಣ್ಣಾಮುಚ್ಚಾಲೆ ಆಟ ಆಡಿದರು.

@KTBS NOT TO BE REPUBLISHED

• ಓದಿದ ಸಾಲುಗಳಲ್ಲಿ ಕೆಂಪು ಬಣ್ಣದ ಪದಗಳನ್ನು ಖಾಲಿ ಜಾಗದಲ್ಲಿ ಬರೆಯೋಣ.

✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

3

## 3.5 ಅಕ್ಷರ ಬಿಡಿಸಿ ಬರೆ

2

ಕೆಳಗಿನ ಗುಣಿತಾಕ್ಷರಗಳಲ್ಲಿರುವ ವ್ಯಂಜನ ಹಾಗೂ ಸ್ವರ ಅಕ್ಷರಗಳನ್ನು ಬಿಡಿಸಿ ಬರೆಯೋಣ.

| ಗುಣಿತಾಕ್ಷರ = ವ್ಯಂಜನ+ಸ್ವರ | ಗುಣಿತಾಕ್ಷರ = ವ್ಯಂಜನ+ಸ್ವರ |
|---|---|
| ಗ = ಗ್ + ಅ | ರ = |
| ಗಾ = ಗ್ + ಆ | ರಾ = |
| ಗಿ = ಗ್ + ಇ | ರಿ = |
| ಗೀ = ಗ್ + ಈ | ರೀ = |
| ಗು = ಗ್ + ಉ | ರು = |
| ಗೂ = ಗ್ + ಊ | ರೂ = |
| ಗೃ = ಗ್ + ಋ | ರೃ = |
| ಗೆ = ಗ್ + ಎ | ರೆ = |
| ಗೇ = ಗ್ + ಏ | ರೇ = |
| ಗೈ = ಗ್ + ಐ | ರೈ = |
| ಗೊ = ಗ್ + ಒ | ರೊ = |
| ಗೋ = ಗ್ + ಓ | ರೋ = |
| ಗೌ = ಗ್ + ಔ | ರೌ = |
| ಗಂ = ಗ್ + ಅಂ | ರಂ = |
| ಗಃ = ಗ್ + ಅಃ | ರಃ = |

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

## 3.5 ಅಕ್ಷರ ಬಿಡಿಸಿ ಬರೆ

ಮುಂದುವರೆದಿದೆ....



**ಕೆಳಗಿನ ಅಕ್ಷರಗಳಲ್ಲಿರುವ ವ್ಯಂಜನ ಹಾಗೂ ಸ್ವರಾಕ್ಷರಗಳನ್ನು ಬಿಡಿಸಿ ಬರೆ.**

| | | |
|---|---|---|
| ಸೀ= | ಮೋ= | ಚೌ= |
| ನಾ= | ಪಂ= | ಹೂ= |
| ಜೈ= | ಖು= | ಬೆ= |

**ಕೆಳಗಿನ ಪದಗಳನ್ನು ಗಟ್ಟಿಯಾಗಿ ಓದೋಣ. ಮಾದರಿಯಂತೆ ಅಕ್ಷರಗಳನ್ನು ಬಿಡಿಸಿ ಬರೆಯೋಣ.**

ದಿನ
- ದ್ + ಇ
- ನ್ + ಅ

ಸಂತೋಷ
- ಸ್+ಅಂ
- ತ್+ಓ
- ಷ್+ಅ

ಶಾಲೆ

ಮೈದಾನ

ಚಂದ

ನೂರಾರು

@KTBS NOT TO BE REPUBLISHED

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

3

## 3.6 ಪ್ರಾಸ ಪದಗಳು

2T

ಗೆಳೆಯರ ಸಹಾಯದಿಂದ ಈ ಪ್ರಾಸ ಗೀತೆ ಓದೋಣ.

### ರಂಗನೂ ಮಂಗನೂ

ತೆಂಗಿನ ಮರದ ಮೇಲೊಂದು ಮಂಗ ।
ತೆಂಗಿನ ಮರದಡಿ ಬಂದನು ರಂಗ ॥
ಮಂಗನ ಕೈಯಲಿ ಮತ್ತೊಂದು ಕಾಯಿ ।
ರಂಗನು ಕಂಡು, ಬಿಟ್ಟನು ಬಾಯಿ ॥
ಹಾರುತ ಎಳೆದನು ಮಂಗನ ಬಾಲ ।
ಮಂಗನು ಉರುಳಿತು, ಹೊಂದಿತು ಸೋಲ ॥
ಬಾಲವ ಎತ್ತಿತು ಕೋಪದಿ ಮೇಲೆ ।
ರಂಗಗೆ ಎಟುಕಿತು ತೆಂಗಿನ ಓಲೆ ॥
ತೆಂಗಿನ ಕಾಯಿಯು ನೆಲದ ಮೇಲೆ ।
ರಂಗಗೆ ತೂಗುವ ಎಲೆ ಉಯ್ಯಾಲೆ. ॥



NOT TO BE REPUBLISHED @KTBS

**ಮಾದರಿಯಂತೆ ಪ್ರಾಸ ಪದಗಳನ್ನು ಆರಿಸಿ ಬರೆಯೋಣ.**

| ಮಂಗ | ರಂಗ |
|---|---|
| | |
| | |
| | |
| | |



ಡಾ.ಕೆ. ಶಿವರಾಮ ಕಾರಂತ

3

## 3.7 ಪ್ರಾಸ ಪದ ಗುರುತಿಸು

3

ಈ ಪ್ರಾಸ ಗೀತೆ ಓದೋಣ.

# ಸುಗ್ಗಿ ಕಾಲ





ಸುಗ್ಗಿ ಬರಲು ಹಿಗ್ಗಿ ಹಾಡಿ
ದುಡಿವರೆಲ್ಲ ರೈತರು,
ಬೆಳೆಯ ಕೊಯ್ದು ರಾಶಿ ಮಾಡಿ
ಮನೆಗೆ ಧಾನ್ಯ ತರುವರು,

ಸುಗ್ಗಿಯಲ್ಲಿ ಜಗ್ಗಿ ಕಾಳು
ತುಂಬಿ ಇಡಲು ಮನೆಯಲಿ,
ಹರುಷವೆಲ್ಲ ಅವರ ಬಾಳು
ಹರುಷ ತರುವ ನಗುವಲಿ.

© KTBS NOT TO BE REPUBLISHED

• ಪ್ರಾಸಪದಗಳನ್ನು ಆರಿಸಿ ಬರೆಯೋಣ

| | |
|---|---|
| | |
| | |
| | |
| | |

3

# 3.8 ಪದ್ಯಕ್ಕೆ ನನ್ನ ಪ್ರಾಸ

3T

ಇಲ್ಲಿನ ಸುಳಿವು ಪದಗಳನ್ನು ಬಳಸಿಕೊಂಡು ಪ್ರಾಸ ಪದ್ಯವನ್ನು ಪೂರ್ಣಗೊಳಿಸೋಣ.

**ಸುಳಿವು:** ಹೋಗೋಣ, ತಿನ್ನೋಣ, ಬಂದ, ಎಂದ



ನಮ್ಮ ಮನೆಯ ಕಂದ
ನೋಡಲು ಬಲು ಚಂದ
ಬಾಗಿಲ ಬಳಿ ..................
ತಿನ್ನಲು ಬೇಕು ..................

@KTBS NOT TO BE REPUBLISHED

ನಾನು ನೀನು ಸೇರಿಕೊಂಡು
ಎತ್ತಿನ ಗಾಡಿ ಏರಿಕೊಂಡು
ನಮ್ಮೂರ ಸಂತೆಗೆ ..............................
ಕಡ್ಲೆ ಪುರಿ ..............................



✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

3

# 3.9 ಒಂದು ಪದ ಹಲವು ಪ್ರಾಸ

3T

ಮಾದರಿಯಂತೆ ಪ್ರಾಸ ಪದಗಳನ್ನು ಬರೆಯೋಣ.

ನಾಡು
- ಕಾಡು
- ಆಡು
- ಹಾಡು

ಹಕ್ಕಿ

ಮಳೆ

ಸುಗ್ಗಿ

ಕೋಲಾಟ

ಅಂದ

@KTBS
NOT TO BE REPUBLISHED

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :

ದಿನಾಂಕ :

3

## 3.10 ಚಿತ್ರ ಜೋಡಿಸೋಣ

3

ಚಿತ್ರವನ್ನು ಹೆಸರಿಸೋಣ, ಒಂದೇ ರೀತಿಯ ಧ್ವನಿಯಿಂದ ಕೊನೆಗೊಳ್ಳುವ ಚಿತ್ರಗಳನ್ನು ಹೊಂದಿಸೋಣ.










@KTBS NOT TO BE REPUBLISHED

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :

ದಿನಾಂಕ :

3

# 3.11 ನಾನು ಓದುವೆ

3

ಕೆಳಗಿನ ಪದಗಳನ್ನು ಗಟ್ಟಿಯಾಗಿ ಓದೋಣ.

| | | | |
|---|---|---|---|
| ಕಣ್ಣು–ಮಣ್ಣು | ಮಜ್ಜಿಗೆ–ಸಜ್ಜಿಗೆ | ಹಾಸ್ಯ–ಲಾಸ್ಯ | ಕಾರ್ಮಿಕ–ಮಾರ್ಮಿಕ |
| ಅಜ್ಜಿ–ಬಜ್ಜಿ | ಅತ್ತಿಗೆ–ಹೊತ್ತಿಗೆ | ವಕ್ರ–ಶುಕ್ರ | ಚಿತ್ರಕಲೆ–ಶಿಲ್ಪಕಲೆ |
| ಹತ್ತು–ಬಿತ್ತು | ಕುಂಟಾಟ–ತುಂಟಾಟ | ಚಂದ್ರ–ಇಂದ್ರ | ಬ್ರಹ್ಮಚಾರಿ–ಗೂಢಾಚಾರಿ |
| ಬಟ್ಟೆ–ಹೊಟ್ಟೆ | ಕರ್ರನೆ–ಪುರ್ರನೆ | ಪ್ರವೇಶ–ಆವೇಶ | ಪ್ರದರ್ಶನ–ನಿದರ್ಶನ |
| ಸೂರ್ಯ–ಕಾರ್ಯ | ಕೈತೋಟ–ಹೂದೋಟ | ಉತ್ಸಾಹ–ಪ್ರೋತ್ಸಾಹ | ಬೆಂಡೆಕಾಯಿ–ತೊಂಡೆಕಾಯಿ |
| ಶೃಂಗ–ಭೃಂಗ | ಕೌರವ–ಗೌರವ | ರಕ್ಷಣೆ–ದಕ್ಷಿಣೆ | ಶರಣ್ಯ–ಅರಣ್ಯ |
| ಭಕ್ತ–ರಕ್ತ | ಮುಚ್ಚಿಡು–ಬಿಚ್ಚಿಡು | ವಿಜ್ಞಾನ–ಸುಜ್ಞಾನ | ಅಕ್ಷರ–ಸಾಕ್ಷರ |
| ಶಿಕ್ಷೆ–ರಕ್ಷೆ | ನುಗ್ಗಾಟ–ಗುದ್ದಾಟ | ಶ್ರಾವಣ–ದ್ರಾವಣ | ಪ್ರಾಥಮಿಕ–ಮಾಧ್ಯಮಿಕ |
| ಕಷ್ಟ–ನಷ್ಟ | ಕೊಕ್ಕರೆ–ಸಕ್ಕರೆ | ಪುಸ್ತಕ–ಮಸ್ತಕ | ಪ್ರಾಣ–ತ್ರಾಣ |
| ಪತ್ರ–ಮಿತ್ರ | ಹೆಕ್ಕಿತು–ಕುಕ್ಕಿತು | ಅಕ್ರಮ–ಸಕ್ರಮ | ಸೂರ್ಯೋದಯ–ಚಂದ್ರೋದಯ |

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

# 3.12 ಕಾಮನ ಬಿಲ್ಲು



**1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.**

| | | |
|---|---|---|
| | | |
| | | |
| | | |

**2. ಇಲ್ಲಿ ನೀಡಿದ ಅಕ್ಷರಗಳನ್ನು ವ್ಯಂಜನ ಮತ್ತು ಸ್ವರಗಳಾಗಿ ವಿಂಗಡಿಸೋಣ.**

| | | | |
|---|---|---|---|
| ಚೋ | ಮೂ | ರೈ | ಜೇ |
| | | | |
| ಪೀ | ದೊ | ಖಾ | ತಿ |
| | | | |

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

# 3.12 ಕಾಮನ ಬಿಲ್ಲು

ಮುಂದುವರೆದಿದೆ....



3. ಸ್ವರ ಹಾಗೂ ವ್ಯಂಜನಗಳನ್ನು ಕೂಡಿಸಿ ಸರಿಯಾದ ಪದಗಳನ್ನು ರಚಿಸೋಣ.

| | |
|---|---|
| ಖ್+ಉ+ಷ+ಇ | |
| ಹ್+ಆ+ಲ್+ಉ | |
| ಸ್+ಆ+ಹ್+ಅ+ಸ್+ಅ | |
| ಆ+ಕ್+ಆ+ಶ್+ಅ | |

4. 5. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

@KTBS NOT TO BE REPUBLISHED

| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :

ದಿನಾಂಕ :

# 4

## 4.1 ನಾನೂ ಮಾತನಾಡುವೆ

ಚಿತ್ರ ಕುರಿತು ಗೆಳೆಯರೊಂದಿಗೆ ವಿಷಯ ಹಂಚಿಕೊಳ್ಳೋಣ.





NOT TO BE REPUBLISHED

### ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಚಿತ್ರದಲ್ಲಿ ಏನೇನು ಕಾಣುತ್ತಿರುವೆ?
2. ಗದ್ದೆಯಲ್ಲಿ ನಾಟಿ ಮಾಡುತ್ತಿರುವುದರ ಕುರಿತು ಮಾತನಾಡು.
3. ಯಾವುದಾದರೂ ಬೆಳೆ ಬೆಳೆಯುವ ವಿಧಾನದ ಬಗ್ಗೆ ನಿನಗೆ ತಿಳಿದಿರುವುದನ್ನು ನಿನ್ನ ಗೆಳೆಯರೊಂದಿಗೆ ಹಂಚಿಕೋ.

ನನ್ನ ಮಾತುಗಳಿಗೆ ನಾನು ಬಣ್ಣ ಹಚ್ಚುವ ಸ್ಟಾರ್‌ಗಳು

# 4

## 4.2 ಕಥೆ ಕೇಳಿ ಹೇಳು

2

ಚಿತ್ರವನ್ನು ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸೋಣ.




1. ಈ ಚಿತ್ರದಲ್ಲಿ ಯಾರು ಯಾರು ಇದ್ದಾರೆ?
2. ಇವರೆಲ್ಲಾ ಏನು ಮಾಡುತ್ತಿರಬಹುದು?
3. ನೀನು ಕೇಳಿರುವ ಕಥೆಗಳಲ್ಲಿ ಯಾವ ಕಥೆ ನಿನಗೆ ಇಷ್ಟ?
4. ಮನೆಯಲ್ಲಿ ನಿನಗೆ ಯಾರು ಯಾರು ಕಥೆಯನ್ನು ಹೇಳುತ್ತಾರೆ?
5. ನೀನು ಯಾರ್ಯಾರಿಗೆ ಕಥೆಗಳನ್ನು ಹೇಳಿದ್ದೀಯಾ?

ಹಿರಿಯರ ಸಹಾಯದೊಂದಿಗೆ ವಿವಿಧ ಕಥೆಗಳನ್ನು ಆಲಿಸೋಣ.

4

# 4.3 ಕಥಾ ವಿಶೇಷ

2T

ಈ ಕಥೆಯನ್ನು ನಿರರ್ಗಳವಾಗಿ ಓದೋಣ.



ಒಂದು ಗುಬ್ಬಚ್ಚಿ ಇತ್ತು. ತುಂಬಾ ಇಷ್ಟಪಟ್ಟು ಮರದ ಮೇಲೆ ಸುಂದರ ಗೂಡೊಂದನ್ನು ಕಟ್ಟಿತು. ಒಂದು ದಿನ ರಾತ್ರಿ ವಿಶ್ರಾಂತಿಗೋಸ್ಕರ ಆ ಗೂಡಲ್ಲಿ ಕುಳಿತುಕೊಂಡಿತ್ತು.

ಆಗಲೇ ಒಂದು ಆನೆಯು ಅಲ್ಲಿಗೆ ಬಂದಿತು. ಬೆನ್ನನ್ನು ಮರಕ್ಕೆ ಒತ್ತಿ, ತನ್ನ ಬೆನ್ನುಜ್ಜಿಕೊಳ್ಳಲು ಪ್ರಾರಂಭಿಸಿತು. ಆಗ ಗುಬ್ಬಚ್ಚಿಯ ಗೂಡು ಕೆಳಗೆ ಬಿದ್ದಿತು. ಗುಬ್ಬಚ್ಚಿಗೆ ದು:ಖವಾಯಿತು.





ಮತ್ತೆ ಗೂಡು ಕಟ್ಟಲು ಬೇಕಾಗಿರುವ ಸಾಮಾನುಗಳನ್ನು ಹುಡುಕುತ್ತಾ, ಹುಡುಕುತ್ತಾ, ಬಹಳ ದೂರಕ್ಕೆ ಹೋಯಿತು. ಆಕಸ್ಮಿಕವಾಗಿ ಅದು ಆಗಸದಲ್ಲಿ ಅನೇಕ ಬಲೂನ್‌ಗಳು ಹಾರಾಡುವುದನ್ನು ಕಂಡಿತು.

©KTBS NOT TO BE REPUBLISHED

# 4

## 4.3 ಕಥಾ ವಿಶೇಷ

ಮುಂದುವರೆದಿದೆ..

ಸ್ವಲ್ಪ ಮುಂದೆ ಹೋದಾಗ ಮರದ ಕೆಳಗೆ ಒಬ್ಬ ವ್ಯಕ್ತಿಯು ಬಲೂನ್ ಮಾರುತ್ತಿರುವುದನ್ನು ಕಂಡಿತು. ಆಗ ಗುಬ್ಬಚ್ಚಿಗೆ ಹೊಸದೊಂದು ಯೋಚನೆ ಹೊಳೆಯಿತು.





ಕೂಡಲೇ ಗುಬ್ಬಚ್ಚಿಯು ಆ ಎಲ್ಲಾ ಬಲೂನ್‌ಗಳನ್ನು ಸಂಗ್ರಹಿಸಿತು. ನಂತರ ಬಲೂನ್‌ಗಳ ಎಲ್ಲಾ ದಾರಗಳನ್ನು ತನ್ನ ಗೂಡಿಗೆ ಒಂದೊಂದಾಗಿ ಜೋಡಿಸಿತು. ಈಗ ಏನಾಗಿರಬಹುದು? ಗುಬ್ಬಿಯ ಗೂಡು ಹಾರುವ ಆಕಾಶ ಬುಟ್ಟಿಯಾಯಿತು.

@KTBS NOT TO BE REPUBLISHED

### ಈ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸೋಣ.

1. ಗುಬ್ಬಚ್ಚಿ ಎಲಿ ಗೂಡು ಕಟ್ಟಿತ್ತು?
2. ಗುಬ್ಬಚ್ಚಿ ಗೂಡು ಕೆಳಗೆ ಬೀಳಲು ಕಾರಣವೇನು?
3. ಗೂಡು ಕೆಳಗೆ ಬಿದ್ದ ನಂತರ ಗುಬ್ಬಚ್ಚಿ ಏನು ಮಾಡಿತು?
4. ಗುಬ್ಬಚ್ಚಿ ತನ್ನ ಗೂಡನ್ನು ಹೇಗೆ ಹಾರುವ ಬುಟ್ಟಿಯನ್ನಾಗಿ ಮಾಡಿತು?

- ✦ ನನಗೆ ಅರ್ಥವಾಗಿದೆ ☐
- ✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

# 4

## 4.3 ಕಥಾ ವಿಶೇಷ

ಮುಂದುವರೆದಿದೆ..

2

ಇವುಗಳಲ್ಲಿ ಯಾವುದು ಹಾರುತ್ತದೆ ಎನ್ನುವುದನ್ನು ಗುರುತು ಮಾಡೋಣ.









ಬಲೂನ್‌ಗಳನ್ನು ಬಳಸಿ
ಬೇರೆ ಬೇರೆ ರೀತಿಯ
ಆಟಗಳನ್ನು ಆಡಿ
ಖುಷಿ ಪಡೋಣ..



@KTBS NOT TO BE REPUBLISHED

- ✦ ನನಗೆ ಅರ್ಥವಾಗಿದೆ ☐
- ✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

4

## 4.3 ಕಥಾ ವಿಶೇಷ

ಮುಂದುವರೆದಿದೆ..

2

**ಗೆರೆಗಳನ್ನು ಸೇರಿಸಿ ಚಿತ್ರ ಬಿಡಿಸಲು ಪ್ರಯತ್ನಿಸೋಣ.**



@KTBS
NOT TO BE REPUBLISHED



| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :

ದಿನಾಂಕ :

4

# 4.4 ಚಿತ್ರ ನೋಡು ಕಥೆ ಹೇಳು

2

ಚಿತ್ರಗಳನ್ನು ಗಮನಿಸೋಣ. ನಮ್ಮದೇ ರೀತಿಯಲ್ಲಿ ಕಥೆ ಹೇಳೋಣ.



@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

4

# 4.5 ಸಂಗೀತ ಕಛೇರಿ

3

ಈ ಕಥೆಯನ್ನು ನಿರರ್ಗಳವಾಗಿ ಓದೋಣ.



ಒಂದು ದಿನ ಕಾಡಿನ ಪ್ರಾಣಿಗಳಿಗೆ ಸಂಗೀತ ಕೇಳಬೇಕು ಎಂದು ಆಸೆ ಆಯಿತು. ಅವು ಸಭೆ ಸೇರಿ “ನಾವೆಲ್ಲರೂ ಒಂದು ಸಂಗೀತ ಕಛೇರಿಯನ್ನು ಏರ್ಪಡಿಸಿ ಮನರಂಜನೆಯನ್ನು ಪಡೆಯಬೇಕು” ಎಂದು ತೀರ್ಮಾನಿಸಿದವು. ನರಿ ಡೋಲು ಬಡಿಯುವುದು, ಆನೆ ಓಲಗ ಊದುವುದು, ತೋಳ ಖಂಜರಿ ನುಡಿಸುವುದು, ಸಿಂಹ ಪಿಟೀಲು... ಹೀಗೆ ಎಲ್ಲಾ ಪ್ರಾಣಿಗಳೂ ಒಂದೊಂದು ಜವಾಬ್ದಾರಿಯನ್ನು ವಹಿಸಿಕೊಂಡವು.

## 4.5 ಸಂಗೀತ ಕಛೇರಿ

ಮುಂದುವರೆದಿದೆ..





ಆ ದಿನ ಬಂದಿತು. ಹಾಡು ಹೇಳಬೇಕಾದ ಹೇಸರಗತ್ತೆ ಎಷ್ಟು ಹೊತ್ತಾದರೂ ಬಂದಿರಲಿಲ್ಲ. "ಏನು ಮಾಡುವುದು? ನಾವು ಅಷ್ಟು ದಿನದಿಂದ ಶ್ರಮ ಪಟ್ಟರೂ ಈ ದಿನ ಹೀಗೆ ಆಯಿತಲ್ಲ!" ಎಂದು ಚಿಂತಿಸಿದವು.

NOT TO BE REPUBLISHED

4

## 4.5 ಸಂಗೀತ ಕಛೇರಿ

ಮುಂದುವರೆದಿದೆ..



ಆಗ ಅಲ್ಲೇ ಮರದ ಮೇಲೆ ಕುಳಿತಿದ್ದ ಕೋಗಿಲೆ, ನವಿಲುಗಳು ಬಂದು “ನಾವು ನಿಮಗೆ ಸಹಾಯ ಮಾಡುತ್ತೇವೆ” ಎಂದು ಹೇಳಿದವು. ಕೋಗಿಲೆ ಹಾಡು ಹೇಳಿತು. ನವಿಲು ನಾಟ್ಯವಾಡಿತು. ಸಂಗೀತ ಕಛೇರಿ ಮುಗಿಯಿತು. ಕೊನೆಗೆ ಎಲ್ಲಾ ಪ್ರಾಣಿಗಳು ಮತ್ತೊಮ್ಮೆ ಸಭೆ ಸೇರಿದವು. ಕೋಗಿಲೆ ಮತ್ತು ನವಿಲಿಗೆ ಬಹುಮಾನ ನೀಡಿ ಸತ್ಕರಿಸಿದವು.

### ಇವುಗಳಿಗೆ ಮೌಖಿಕವಾಗಿ ಉತ್ತರಿಸೋಣ.

1. ಪ್ರಾಣಿಗಳು ಯಾವ ತೀರ್ಮಾನ ಮಾಡಿದವು?
2. ಪ್ರಾಣಿಗಳು ಯಾವ ಯಾವ ಜವಾಬ್ದಾರಿಯನ್ನು ವಹಿಸಿಕೊಂಡವು?
3. ಯಾರಿಗೆ ಬಹುಮಾನ ನೀಡಿ ಸತ್ಕರಿಸಲಾಯಿತು?

### ಹೊಂದಿಸೋಣ.

✻ ಜೀವಿಗಳ ಹೆಸರನ್ನೂ ಅವುಗಳುಂಟುಮಾಡುವ ಸ್ವರ ಸೂಚಿಸುವ ಪದಗಳನ್ನೂ ಓದಿ ಗೆರೆ ಎಳೆದು ಹೊಂದಿಸಿರಿ.

| | |
|---|---|
| ಕೋಗಿಲೆ | ಗರ್ಜಿಸುತ್ತದೆ |
| ನಾಯಿ | ಗುಯಿಂಗುಟ್ಟುತ್ತದೆ |
| ಕತ್ತೆ | ಕೂಗುತ್ತದೆ |
| ಆನೆ | ಝೇಂಕರಿಸುತ್ತದೆ |
| ಸಿಂಹ | ವಟಗುಟ್ಟುತ್ತದೆ |
| ನೊಣ | ಘೀಳಿಡುತ್ತದೆ |
| ಕಪ್ಪೆ | ಅರಚುತ್ತದೆ |
| ದುಂಬಿ | ಬೊಗಳುತ್ತದೆ |

✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

@KTBS NOT TO BE REPUBLISHED

4

## 4.6 ಓದಿ ಹೇಳು

3

ಕಥೆಯ ಈ ಸನ್ನಿವೇಶವನ್ನು ಧ್ವನಿಯ ಏರಿಳಿತದೊಂದಿಗೆ ಓದೋಣ.



ನಾವೆಲ್ಲರೂ ಒಂದು ಸಂಗೀತ ಕಚೇರಿಯನ್ನು ಏರ್ಪಡಿಸಿ ಮನರಂಜನೆಯನ್ನು ಪಡೆಯಬೇಕು.

ಏನು ಮಾಡುವುದು? ನಾವು ಅಷ್ಟು ದಿನದಿಂದ ಶ್ರಮ ಪಟ್ಟರೂ ಈ ದಿನ ಹೀಗೆ ಆಯಿತಲ್ಲ





ನಾವು ನಿಮಗೆ ಸಹಾಯ ಮಾಡುತ್ತೇವೆ.

@KTBS
NOT TO BE REPUBLISHED

| | |
|---|---|
| ✦ ನನಗೆ ಅರ್ಥವಾಗಿದೆ | ☐ |
| ✦ ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

4

## 4.7 ಓದಿ ತಿಳಿಯೋಣ

3T

ಧ್ವನಿಯ ಏರಿಳಿತದೊಂದಿಗೆ ಇಲ್ಲಿನ ವಾಕ್ಯಗಳನ್ನು ಓದೋಣ. ನಾನು ಯಾರೆಂದು ತಿಳಿಯೋಣ.



ಆಹಾ! ನನ್ನ ನೋಡು. ನಾನೆಷ್ಟು ಸುಂದರ! ನಾನು ಗರಿ ಬಿಚ್ಚಿ ನೃತ್ಯ ಮಾಡುವೆ.



ನನ್ನ ಧ್ವನಿ ಎಷ್ಟೊಂದು ಇಂಪು! ನಾನು ಎಲೆಗಳ ಮರೆಯಲ್ಲಿ ಕುಳಿತು, ಕೂಹು..ಕೂಹು. ಎಂದು ಹಾಡುವೆ.



ನನ್ನ ನೋಡು. ಎಷ್ಟೊಂದು ಸೋಜಿಗ! ನಾನು ನನ್ನ ಮರಿಗಳಿಗಾಗಿ ಬೆಚ್ಚನೆಯ ಗೂಡು ಕಟ್ಟುವೆ.

@KTBS NOT TO BE REPUBLISHED

4

## 4.8 ಓದಿ ಹೇಳು

3

ಚಿತ್ರ ಸರಣಿಗಳನ್ನು ಗಮನಿಸಿ, ನಮ್ಮದೇ ಕಥೆಯನ್ನು ಕಲ್ಪಿಸಿ ಹೇಳೋಣ.
ಇಲ್ಲಿ ಕೊಟ್ಟಿರುವ ಕಥೆಯನ್ನು ಗೆಳೆಯರ ಮುಂದೆ ಧ್ವನಿಯ ಏರಿಳಿತದೊಂದಿಗೆ ಓದೋಣ.
ನಮ್ಮ ಕಥೆಯೊಂದಿಗೆ ಇಲ್ಲಿರುವ ಕಥೆಯನ್ನು ಹೋಲಿಸೋಣ.

## ಹುಲಿ ಮತ್ತು ಸೊಳ್ಳೆ



ಹುಲಿಯೊಂದು ಮರದ ಕೆಳಗೆ ಮಲಗಿತ್ತು. ಒಂದು ಸೊಳ್ಳೆ ಗುಂಯ್ ಗುಟ್ಟುತ್ತಾ ಮುಖದ ಹತ್ತಿರ ಬಂತು. ಆಗ ಹುಲಿ, "ಏ ಸೊಳ್ಳೆ, ಇಲ್ಲಿಂದ ಹೋಗು"

@KTBS NOT TO BE REPUBLISHED

ಎಂದಿತು."ನಾನ್ಯಾಕೆ ಇಲ್ಲಿಂದ ಹೋಗ್ಬೇಕು? ನಾನು ನಿನಗೆ ಹೆದರುವುದಿಲ್ಲ." ಎಂದಿತು ಸೊಳ್ಳೆ. ಇದನ್ನು ಕೇಳಿ ಹುಲಿಗೆ ಸಿಟ್ಟು ಬಂದಿತು.





NOT TO BE REPUBLISHED @KTBS

ಸೊಳ್ಳೆಯನ್ನು ಸಾಯಿಸಲು ತನ್ನ ಕಾಲಿನಿಂದ ಹೊಡೆಯಿತು. ಸೊಳ್ಳೆ ಹಾರಿ ಹೋಯಿತು. ಕಾಲಿನ ಹೊಡೆತ ಹುಲಿಯ ಮುಖದ ಮೇಲೆ ಬಿದ್ದು ಗಾಯವಾಯಿತು. ರಕ್ತ ಬಂದಿತು. “ನಿನ್ನನ್ನು ಬಿಡಲ್ಲ ನಾನು” ಹುಲಿ ಹೇಳಿತು. ಅದನ್ನು ಕೇಳಿ ಸೊಳ್ಳೆ ನಕ್ಕಿತು. ಮತ್ತೆ ಮುಖದ ಮೇಲೆ ಕುಳಿತಿತು. ಹುಲಿ ಪುನಃ ಹೊಡೆಯಿತು. ಸೊಳ್ಳೆ ಮತ್ತೆ ತಪ್ಪಿಸಿಕೊಂಡಿತು. ಹುಲಿಯ ಮುಖದಿಂದ ಮತ್ತೆ ರಕ್ತ ಬಂತು. ಸೊಳ್ಳೆ ಜೋರಾಗಿ ನಕ್ಕಿತು.

## 4.8 ಓದಿ ಹೇಳು

ಮುಂದುವರೆದಿದೆ..





© NOT TO BE REPUBLISHED

ಸೊಳ್ಳೆಯನ್ನು ಸಾಯಿಸುವುದು ಸಾಧ್ಯವಿಲ್ಲ ಎಂದು ಹುಲಿಗೆ ತಿಳಿಯಿತು. ಆಗ ಸೊಳ್ಳೆ, "ಗೆಳೆಯಾ, ಇಲ್ಲಿ ಯಾರಿಗೆ ಯಾರೂ ದೊಡ್ಡವರೂ ಅಲ್ಲ, ಚಿಕ್ಕವರೂ ಅಲ್ಲ. ಎಲ್ಲರಿಗೂ ಅವರದೇ ಆದ ವಿಶೇಷ ಗುಣಗಳು ಇರುತ್ತವೆ" ಎಂದಿತು. ಹುಲಿ ಸೋತು ಅಲ್ಲಿಂದ ಹೊರಟು ಹೋಯಿತು.

**ಇವುಗಳಿಗೆ ಮೌಖಿಕವಾಗಿ ಉತ್ತರಿಸೋಣ.**

1. ಯಾರ ಯಾರ ನಡುವೆ ಮಾತುಕತೆ ನಡೆಯಿತು?
2. ಕತೆಯಲ್ಲಿ ಯಾರಿಗೆ ಸೋಲಾಯಿತು?
3. ಸೊಳ್ಳೆಯು ಅಂತಿಮವಾಗಿ ಏನು ಹೇಳಿತು?

| | |
|---|---|
| ✦ ನನಗೆ ಅರ್ಥವಾಗಿದೆ ☐ | ಶಿಕ್ಷಕರ ಸಹಿ : |
| ✦ ನನಗೆ ಸಹಾಯ ಬೇಕಿದೆ ☐ | ದಿನಾಂಕ : |

4

## 4.9 ಮಾತಿಗೊಂದು ಧ್ವನಿ

3

**ಹುಲಿ ಮತ್ತು ಸೊಳ್ಳೆ ಕಥೆಯಲ್ಲಿನ ಕೆಲವು ಸಂಭಾಷಣೆಗಳನ್ನು ಬರೆದು, ಧ್ವನಿ ಏರಿಳಿತದೊಂದಿಗೆ ಹೇಳೋಣ.**



©KTBS NOT TO BE REPUBLISHED

**ಬೇರೆ ಬೇರೆ ಕಥೆಗಳನ್ನು ಓದಿ, ಧ್ವನಿ ಏರಿಳಿತದೊಂದಿಗೆ ಹೇಳುವುದನ್ನು ಅಭ್ಯಾಸಿಸೋಣ.**

| | |
|---|---|
| ✦ ನನಗೆ ಅರ್ಥವಾಗಿದೆ | |
| ✦ ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :

ದಿನಾಂಕ :

4

## 4.10 ಯೋಜನೆ

3

ದಿನಪತ್ರಿಕೆಯಲ್ಲಿನ ಯಾವುದಾದರೂ ಒಂದು ಚಿಕ್ಕ ಕಥೆಯನ್ನು ಸಂಗ್ರಹಿಸಿ ಇಲ್ಲಿ ಬರೆದು, ಧ್ವನಿ ಏರಿಳಿತದೊಂದಿಗೆ ಓದೋಣ.

@KTBS
NOT TO BE REPUBLISHED

4

## 4.11 ಕಾಮನ ಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.

2. ಇಲ್ಲಿ ನೀಡಿದ ಪದಗಳ ಅಕ್ಷರಗಳು ಬದಲಾಗಿವೆ. ಅವುಗಳನ್ನು ಸರಿಪಡಿಸಿ ನೀಡಿದ ಜಾಗದಲ್ಲಿ ಬರೆದು ಓದೋಣ.

| | | |
|---|---|---|
| ಚ್ಚಿಬ್ಬಗು | ಗೀಸಂತ | ರಿಖಂಜ |
| | | |
| ಷವಿಶೇ | ಗ್ರಸಂಸುಹಿ | ರಂನೆನಮಜ |
| | | |

NOT TO BE REPUBLISHED @KTBS

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

4

## 4.11 ಕಾಮನಬಿಲ್ಲು

ಮುಂದುವರೆದಿದೆ....

3

**3. ಪದದೊಳಗಿನ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ರಚಿಸೋಣ.**

### ಅಜರಾಮರ

..........................................................................................................

..........................................................................................................

..........................................................................................................

**4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.**

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ ☐
✦ ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :